ಸಂಪುಟ 01 | ಸಂಚಿಕೆ 123 | ಶನಿವಾರ 21 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

ಅಂತರರಾಷ್ಟ್ರೀಯ ಅರಣ್ಯ ದಿನ (International Forest Day)

ಈ ವರ್ಷದ ಥೀಮ್ ಅರಣ್ಯಗಳು ಪರಿಸರಕ್ಕೆ ಮಾತ್ರವಲ್ಲ, ಆರ್ಥಿಕ ಬೆಳವಣಿಗೆಗೂ ಪ್ರಮುಖವಾಗಿವೆ ಎಂಬುದನ್ನು ತೋರಿಸುತ್ತದೆ. ಅರಣ್ಯಗಳು ಉದ್ಯೋಗ, ಜೀವನೋಪಾಯ ಮತ್ತು ಅಭಿವೃದ್ಧಿಗೆ ಸಹಾಯ ಮಾಡುತ್ತವೆ.

## ಸುಭಾಷಿತ

ಬಾಲ್ಯದಲ್ಲಿ ಕಲಿತದ್ದೇ ಬದುಕಿನಲ್ಲಿ ಉಳಿಯುವುದರಿಂದ ಮಕ್ಕಳಿಗೆ ಕನ್ನಡ ಸಂಸ್ಕಾರ ಕಲಿಸಬೇಕು.

–ಚೆನ್ನವೀರ ಕಣವಿ

## ಕಾಲುವೆಗೆ ಜಾರಿ ಬಿದ್ದು ಯುವಕ ಸಾವು

❑ ನೈಜ್ಯ ದೇಸೆ ನ್ಯೂಸ್

ಅರಕೇರಾ: ಯುಗಾದಿ ಹಬ್ಬದ ಕರಿದಿನವಾದ ಶುಕ್ರವಾರ ಸ್ನೇಹಿತರೊಂದಿಗೆ ಬಣ್ಣದಾಟವಾಡಿದ ಬಳಿಕ ಕಾಲುವೆಯಲ್ಲಿ ಸ್ನಾನಕ್ಕೆ ತೆರಳಿದ್ದ ಯುವಕನೊಬ್ಬ ಕಾಲು ಜಾರಿ ಬಿದ್ದು ಹ–ರಿದು ಹೋಗಿ ಮೃತಪಟ್ಟ ದಾರುಣ ಘಟನೆ ನಡೆದಿದೆ.



ತಾಲೂಕಿನ ಬುದ್ದಿನ್ನಿ ಗ್ರಾಮದ ಗಂಗಾಧರ ಆಂಜನೇಯ (20) ಮೃತ ದುರ್ದೈವಿ. ಈತ ಈ ವರ್ಷ ಬಿ.ಎಸ್ಸಿ, ಪ್ರಥಮ ವರ್ಷ ರಾಯಚೂ–ರಿನಲ್ಲಿ ವ್ಯಾಸಂಗ ಮಾಡುತ್ತಿದ್ದನು. ಸ್ನೇಹಿತರೊಂದಿಗೆ ಹಬ್ಬದ ಸಂಭ್ರಮದಲ್ಲಿ ಬಣ್ಣದಾಟವಾಡಿದ ಬಳಿಕ ಕಾಲುವೆಗೆ ಇಳಿದ ವೇಳೆ ಕಾಲು ಜಾರಿ ನೀರಿಗೆ ಬಿದ್ದಿದ್ದು, ಹರಿದು ಹೋಗಿದ್ದಾನೆ ಎಂದು ತಿಳಿದುಬಂದಿದೆ. ನಂತರ ನಾಗೋಲಿ ಗ್ರಾಮದ ಹತ್ತಿರದ ಕಾಲುವೆಯಲ್ಲಿ ಯುವಕನ ಮೃತದೇಹ ಪತ್ತೆಯಾಗಿದೆ. ಗಬ್ಬೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಠಾಣೆಗೆ ಕರೆತಂದಿದ್ದ ವ್ಯಕ್ತಿ ಸಾವು, ಲಾಕಪ್ ಡೆತ್ ಆರೋಪ :ಸಿಐಡಿ ತನಿಖೆಗೆ ಪರಂ ಭರವಸೆ

**ತುಮಕೂರು: ಯುಗಾದಿ ಹಬ್ಬದ ಸಂದರ್ಭದಲ್ಲಿ ಜೂಜಾಟದಲ್ಲಿ ತೊಡಗಿದ್ದ ಆರೋಪದಲ್ಲಿ ಠಾಣೆಗೆ ಕರೆತಂದಿದ್ದ ವ್ಯಕ್ತಿಯ ಅಸಹಜ ಸಾವಿನ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.**

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಘಟನೆಯ ಬಗ್ಗೆ ತಾವು ತುಮಕೂರು ಜಿಲ್ಲೆಯ ಎಸ್‌ಪಿ ಅವರ ಜೊತೆ ಚರ್ಚೆ ನಡೆಸಿದ್ದು, ಅದು ಲಾಕ್‌ಅಪ್‌ಡೆತ್ ಅಲ್ಲ ಎಂದು ಹೇಳಿದ್ದಾರೆ. ಠಾಣೆಗೆ ಕರೆ ತಂದಿದ್ದಕ್ಕೆ ಆತಂಕಗೊಂಡು ಸಾವನ್ನಪ್ಪಿದ್ದಾರೆ ಎಂದು ವಿವರಿಸಿರುವುದಾಗಿ ತಿಳಿಸಿದರು. ಸದರಿ ವ್ಯಕ್ತಿಯನ್ನು ಪೊಲೀಸರು ಥಳಿಸಿದ್ದರಿಂದಾಗಿ ಮೃತಪಟ್ಟಿದ್ದಾರೆ ಎಂದು ಕುಟುಂಬದ ಸದಸ್ಯರು ಆರೋಪಿಸಿದ್ದಾರೆ. ಸಿಐಡಿ ತನಿಖೆಯಾದರೆ, ಸತ್ಯ ಗೊತ್ತಾಗುತ್ತದೆ. ಮರಣೋತ್ತರ ಪರೀಕ್ಷೆಯಲ್ಲೂ ಸತ್ಯ ಗೊತ್ತಾಗುತ್ತದೆ.

ಸಿಐಡಿ ತನಿಖೆಯಲ್ಲಿ ಥಳಿಸಿರುವುದು ಹಾಗೂ ಒಟ್ಟಾರೆ ಘಟನೆ ಬಗ್ಗೆ ವಿಷಯ




ತಿಳಿಯಲಿದೆ. ಒಂದು ವೇಳೆ ಲೋಪಗಳಾಗಿದ್ದರೆ, ಸಿಐಡಿ ವರದಿ ಬಳಿಕ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ತುಮಕೂರು ವರದಿ: ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಜೂಜಾಟದಲ್ಲಿ ತೊಡಗಿದ್ದವರ ಮೇಲೆ ದಾಳಿ ನಡೆಸಿ ವಶಕ್ಕೆ ಪಡೆದಿದ್ದ ವ್ಯಕ್ತಿ ಸಾವನ್ನಪ್ಪಿದ ಘಟನೆ ಹುಳಿಯಾರು ಪೊಲೀಸ್ ಠಾಣೆಯಲ್ಲಿ ನಡೆದಿದ್ದು, ಸಂಬಂಧಿಕರು ಠಾಣೆಯ ಮುಂದೆ ಪ್ರತಿಭಟನೆ ನಡೆಸಿದ್ದಾರೆ.ಮೃತನನ್ನು ಕಾಂತರಾಜು (45) ಎಂದು ಗುರುತಿಸಲಾಗಿದೆ. ಪೊಲೀಸರ ಹಲ್ಲೆಯಿಂದ ಕಾಂತರಾಜು ಸಾವನ್ನಪ್ಪಿದ್ದಾನೆ ಎಂದು ಗ್ರಾಮಸ್ಥರು ಆರೋಪಿಸಿ ದ್ದಾರೆ.

ಇಸ್ಪೀಟ್ ಆಡುತ್ತ್ತಿದ್ದನ್ನು 6 ಜನರನ್ನ ಪೊಲೀಸರು ಠಾಣೆಗೆ ಕರೆದುಕೊಂಡು ಬಂದಿದ್ದರು. ಈ ವೇಳೆ ಠಾಣೆಯಲ್ಲಿ ಕಾಂತ ರಾಜು ಸಾವನ್ನಪ್ಪಿದ್ದರು. ಇದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಹುಳಿಯಾರು ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ, ಠಾಣೆಗೆ ಬೀಗ ಜಡಿದು ಪ್ರತಿಭಟಿಸಿದ್ದಾರೆ.ಪರಿಸ್ಥಿತಿ ವಿಕೋಪಕ್ಕೆ ತಿರುಗುವುದನ್ನು ತಡೆಯಲು ಎಸ್‌ಪಿ ಅಶೋಕ್ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥತಿ ತಹಬಂದಿಗೆ ತಂದಿದ್ದಾರೆ. ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಗ್ರಾಮಸ್ಥರಿಗೆ ಎಸ್‌ಪಿಭರವಸೆ ನೀಡಿದ ಬಳಿಕ ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟಿದ್ದಾರೆ.ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ಕುಟುಂಬ ಸ್ಥರಿಗೆ ಹಸ್ತಾಂತರಿಸಲಾಗಿದೆ. ಗ್ರಾಮದಲ್ಲಿ ಇನ್ನೂ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿ–ದೆ.ಹೆಚ್ಚಿನ ಪೊಲೀಸ್‌ಭದ್ರತೆ ಕಲ್ಪಿಸಲಾಗಿದೆ. ಇದು ಲಾಕಪ್ ಡೆತ್ ಎಂದು ಗ್ರಾಮಸ್ಥರು ಆರೋಪಿಸಿ ಆಕ್ರೋಶ ಹೊರಹಾಕಿದ್ದಾರೆ.

# ರಾಜ್ಯದಲ್ಲಿ ಆಲಿಕಲ್ಲು ಸಹಿತ ಅಕಾಲಿಕ ಮಳೆ–ಅಪಾರ ಬೆಳೆ ಹಾನಿ



❑ ನೈಜ್ಯ ದೇಸೆ ನ್ಯೂಸ್

ಕಳೆದ ಎರಡು ದಿನಗಳಿಂದ ರಾಜ್ಯದಾದ್ಯಂತ ಸಂಭವಿಸಿದ ಹಠಾತ್ ಆಲಿಕಲ್ಲು ಮಳೆ ಹಾಗೂ ಬಿರುಗಾಳಿಯಿಂದಾಗಿ ಕೃಷಿ ಮತ್ತು ತೋಟಗಾ–ರಿಕೆ ಬೆಳೆಗಳಿಗೆ ಅಪಾರ ಹಾನಿಯುಂಟಾಗಿದ್ದು, ಸಂಕಷ್ಟದಲ್ಲಿರುವ ರೈತರಿಗೆ ಕೂಡಲೇ ಪರಿಹಾರ ಘೋಷಿಸುವಂತೆ ಒತ್ತಾಯ ಕೇಳಿಬಂದಿದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಆಲಿಕಲ್ಲು ಮಳೆಯ ಆರ್ಭಟಕ್ಕೆ ಸಾವಿರಾರು ಎಕರೆ ಪ್ರದೇಶದ ಬೆಳೆಗಳು ನಾಶವಾಗಿವೆ: ಧಾರವಾಡ: ಕಲಘಟಗಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಹಿಮಪಾತದಂತೆ ಆಲಿಕಲ್ಲು ಮಳೆ ಬಿದ್ದಿದ್ದು, ಸುಮಾರು 450 ಎಕರೆ ಪ್ರದೇಶದ ಮಾವು ಹಾಗೂ ಬಾಳೆ ಬೆಳೆ ಸಂಪೂರ್ಣ ಹಾನಿಯಾಗಿದೆ. ಬಾಗಲಕೋಟೆ: ಅಕಾಲಿಕ ಮಳೆಯ ಹೊಡೆತಕ್ಕೆ ಸುಮಾರು 2,400 ಎಕರೆ ತೋಟಗಾರಿಕೆ ಬೆಳೆಗಳು ನಾಶವಾಗಿವೆ. ಬೆಳಗಾವಿ: ಬಿರುಗಾಳಿ ಸಹಿತ ಮಳೆಗೆ 150 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ನೆಲಕಚ್ಚಿವೆ. ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಅಂದಾಜು 2.5 ಕೋಟಿ ರೂಪಾಯಿ ಮೌಲ್ಯದ ಬೆಳೆ ಹಾನಿಯಾಗಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

ಯಾದಗಿರಿ ಮತ್ತು ಇತರ ಜಿಲ್ಲೆಗಳು: ಇಲ್ಲಿನ ಪ್ರಮುಖ ಬೆಳೆಗಳಾದ ಜೋಳ ಮತ್ತು ಭತ್ತ ಅಕಾಲಿಕ ಮಳೆಗೆ ಸಿಲುಕಿ ಇಳುವರಿ ಕುಂಠಿತಗೊಂಡಿದೆ. ಮುಂದಿನ ಮೂರು ದಿನಗಳ ಕಾಲ ರಾಜ್ಯದಾದ್ಯಂತ ಮಳೆ ಮುಂದುವರಿಯುವ ಸಾಧ್ಯತೆ ಇರುವುದ–ರಿಂದ ಹವಾಮಾನ ಇಲಾಖೆಯು 18 ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಿದೆ. ರಾಯಚೂರು, ಕೊಪ್ಪಳ, ಗದಗ, ಧಾರವಾಡ, ದಾವಣಗೆರೆ, ಚಿತ್ರದುರ್ಗ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಮಂಡ್ಯ, ಚಾಮರಾಜನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ.ಕರಾವಳಿ ಜಿಲ್ಲೆಗಳಲ್ಲಿ ಮಳೆಯ ಜೊತೆಗೆ ಉಷ್ಣ ಅಲೆಯ (Heat wave) ಎಚ್ಚ–ರಿಕೆ ನೀಡಲಾಗಿದ್ದರೆ, ಒಳನಾಡು ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆಯಿದೆ.

## ಮಾ.22 ರಂದು ಚಾಲೆಂಜ್ ಜೀನಿಯಸ್ ಅವಾರ್ಡ್ ಪರೀಕ್ಷೆ: ಬಸವರಾಜ ವಲ್ಕಂದಿನ್ನಿ

❑ ನೈಜ್ಯ ದೇಸೆ ನ್ಯೂಸ್

**ನಗರದಲ್ಲಿರುವ ಚಾಲೆಂಜ್ ಕೋಚಿಂಗ್ ಸೆಂಟರ್ ವತಿಯಿಂದ 'ಚಾಲೆಂಜ್ ಜೀನಿಯಸ್ ಅವಾರ್ಡ್' ಪರೀಕ್ಷೆಯನ್ನು ಬಡ ಪ್ರತಿಭಾವಂತ ಮಕ್ಕಳಿಗಾಗಿ ಆಯೋಜನೆ ಮಾಡಲಾಗಿದ್ದು, ಅತಿ ಹೆಚ್ಚು ಅಂಕಗಳನ್ನು ಪಡೆದ 20 ವಿದ್ಯಾರ್ಥಿಗಳಿಗೆ ಸಂಸ್ಥೆಯ ವತಿಯಿಂದ ಉಚಿತ ಶಿಕ್ಷಣ ಕೊಡಲಾಗುತ್ತದೆ ಎಂದು ಸಂಸ್ಥೆಯ ಸಂಸ್ಥಾಪಕರು ಹಾಗೂ ಅಧ್ಯಕ್ಷರಾದ ಬಸವರಾಜ ವಲ್ಕಂದಿನ್ನಿ ತಿಳಿಸಿದರು.**

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನವೋದಯ, ಸೈನಿಕ, ಆದರ್ಶ, ಕಿತ್ತೂರ, ಮೊರಾರ್ಜಿ, ಸೇರಿದಂತೆ ಪ್ರತಿಷ್ಠಿತ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು



ಸನ್ನದ್ಧರಾಗಲು ಸಂಸ್ಥೆ ವತಿಯಿಂದ ಕೋಚಿಂಗ್ ಮಾಡಲಾಗುತ್ತದೆ. ನಾವು ನಡೆಸುವ ಪರೀಕ್ಷೆಯಲ್ಲಿ ಆಯ್ಕೆಯಾದ ಒಟ್ಟು 20 ವಿದ್ಯಾರ್ಥಿಗಳಿಗೆ ಬಟ್ಟೆ ಮತ್ತು ಪುಸ್ತಕದ ಹಣ ಕಟ್ಟಿದರೆ ಸಾಕು, ಉಳಿದ ವಸತಿ, ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತದೆ. ನೋಂದಣಿಗೆ 200 ರೂ.ಪ್ರವೇಶ ಶುಲ್ಕವಿದೆ.

ಪಾಲಕರು ಇದರ ಸದುಪಯೋಗ ಪಡಿಸಿಕೊಳ್ಳಿ. ಪ್ರಥ–'ಮ ಬಹುಮಾನ 10 ಸಾವಿರ ದ್ವಿತೀಯ 7,500, ತೃತೀಯ 5,100, ಚತುಥ–'ರ್ ಬಹುಮಾನ 2,500, ರೂ. ನೀಡಲಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕೊಚಿಂಗ್ ತರಬೇತಿದಾರ ಅಕ್ಷಯ ಪಾಟೀಲ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

## ರಾಯಚೂರಿನಲ್ಲಿ ರಂಜಾನ್ ಸಂಭ್ರಮ: ಮಾರುಕಟ್ಟೆಗಳಲ್ಲಿ ಖರೀದಿ ಭರಾಟೆ, ಹಬ್ಬದ ಸಡಗರ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಪವಿತ್ರ ರಂಜಾನ್ ಮಾಸದ ಅಂಗವಾಗಿ ಶನಿವಾರದಂದು ಜಿಲ್ಲೆಯಾದ್ಯಂತ 'ಈದ್–ಉಲ್–ಫಿತ್ರ್' ಆಚರಿಸಲು ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ. ಶುಕ್ರವಾರ ಕರಾವಳಿ ಜಿಲ್ಲೆಗಳಲ್ಲಿ ಹಬ್ಬದ ಆಚರಣೆಯಾಗಿದ್ದರೆ,**

ರಾಯಚೂರಿನಲ್ಲಿ ಶನಿವಾರ ಹಬ್ಬವಿರುವ ಹಿನ್ನೆಲೆಯಲ್ಲಿ ನಗರದ ಪ್ರಮುಖ ಮಾರುಕಟ್ಟೆಗಳು ಗ್ರಾಹಕರಿಂದ ಕಿಕ್ಕಿರಿದು ತುಂಬಿದ್ದವು.ನಗರದ ಐತಿಹಾಸಿಕ ಟಿಪ್ಪು ಸುಲ್ತಾನ್ ಮಾರುಕಟ್ಟೆ, ಅರಬ್ ಮೊಹಲ್ಲಾ, ಉಸ್ಮಾನಿಯಾ ಮಾರುಕಟ್ಟೆ ಹಾಗೂ ಚಾಂದನಿ ಬಜಾರ್ ಪ್ರದೇಶಗಳಲ್ಲಿ ಜನಸಾಗರವೇ ಹ–ರಿದುಬಂದಿತ್ತು. ಬೆಲೆ ಏರಿಕೆಯ ಬಿಸಿಯಿದ್ದರೂ ಸಹ, ಹಬ್ಬದ ಉತ್ಸಾಹದಲ್ಲಿ ಯಾವುದೇ ಕುಂದು ಕಂಡುಬಂದಿಲ್ಲ.ಹೆಣ್ಣುಮಕ್ಕಳು ಸೀರೆ, ಚೂಡಿದಾರ ಮತ್ತು ಸಲ್ವಾರ್ ಕಮೀಜ್



ಖರೀದಿಯಲ್ಲಿ ಮಗ್ನರಾಗಿದ್ದರೆ, ಪುರುಷರು ಮತ್ತು ಮಕ್ಕಳು ಹೊಸ ವಿನ್ಯಾಸದ ಟೋಪಿ ಹಾಗೂ ಬಟ್ಟೆಗಳನ್ನು ಖರೀದಿಸಿದರು.

ಕೆಲವು ಮಳಿಗೆಗಳು 'ಬೈ ಒನ್ ಗೆಟ್ ಒನ್' ನಂತಹ ವಿಶೇಷ ರಿಯಾಯಿತಿಗಳನ್ನು ನೀಡಿ ಗ್ರಾಹಕರನ್ನು ಆಕರ್ಷಿಸಿದವು. ನಮಾಜ್‌ಗೆ ಹೋಗುವ ಮುನ್ನ ಹಚ್ಚಿಕೊಳ್ಳುವ ಅತ್ತರ್ (ಸುಗಂಧ ದ್ರವ್ಯ) ಮಾರಾಟವು ಜೋರಾಗಿ–ತ್ತು.ಈ ಬಾರಿ ಮಾರುಕಟ್ಟೆಗೆ ಕೊಲ್ಲಿ ದೇಶಗಳಿಂದ ಅರ್ಝ್ವಾ, ಕಿಮಿಯಾ, ಕಲ್ಮಿ ಸೇರಿದಂತೆ 25ಕ್ಕೂ ಹೆಚ್ಚು ತಳಿಯ ಖರ್ಜೂರಗಳು ಬಂದಿದ್ದು, ಗ್ರಾಹಕರು ಮುಗಿಬಿದ್ದು ಖರೀದಿಸಿದರು. ಈ ಬಾರಿ ಮಾರುಕಟ್ಟೆಗೆ ಕೊಲ್ಲಿ ದೇಶಗಳಿಂದ ಅರ್ಝ್ವಾ, ಕಿಮಿಯಾ, ಕಲ್ಮಿ ಸೇರಿದಂತೆ 25ಕ್ಕೂ ಹೆಚ್ಚು ತಳಿಯ ಖರ್ಜೂರಗಳು ಬಂದಿದ್ದು, ಗ್ರಾಹಕರು ಮುಗಿಬಿದ್ದು ಖರೀದಿಸಿದರು.

ರಾಯಚೂರಿನ ಮಾರುಕಟ್ಟೆಯಲ್ಲಿ ಕೇವಲ ಮುಸ್ಲಿಂ ಸಮುದಾಯದವರಷ್ಟೇ ಅಲ್ಲದೆ, ವಿವಿಧ ಧರ್ಮಗಳ ವ್ಯಾಪಾ–ರಿಗಳು ಮತ್ತು ಗ್ರಾಹಕರು ಪರಸ್ಪರ ಬೆರೆತು ವ್ಯವಹಾರ ನಡೆಸುತ್ತಿರುವುದು ಜಿಲ್ಲೆಯ ಕೋಮು ಸೌಹಾರ್ದತೆಗೆ ಸಾಕ್ಷಿಯಾಗಿದೆ. ಹಬ್ಬವು ಕೇವಲ ಒಂದು ಧರ್ಮಕ್ಕೆ ಸೀಮಿತವಾಗದೆ, ಮಾರುಕಟ್ಟೆಯ ಆರ್ಥಿಕ ಚಟುವಟಿಕೆಗೆ ದೊಡ್ಡ ಚೈತನ್ಯ ನೀಡಿದೆ.

# ರಾಯಚೂರು ಗ್ರಾಮೀಣಾಭಿವೃದ್ಧಿ ತ್ರೈಮಾಸಿಕ ಪತ್ರಿಕೆ ಬಿಡುಗಡೆ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಗ್ರಾಮೀಣಾಭಿವೃದ್ಧಿ ಪತ್ರಿಕೆ' ಎಂಬ ತ್ರೈಮಾಸಿಕ ಸುದ್ದಿ ಪತ್ರಿಕೆಯನ್ನು (ಮ್ಯಾಗಜೀನ್) ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕಾಂದೂ ಅವರು ಮಾರ್ಚ 20ರಂದು ನಗರದ ಜಿಲ್ಲಾ ಪಂಚಾಯತಿ ಕಚೇರಿಯಲ್ಲಿ ಬಿಡುಗಡೆಗೊಳಿಸಿದರು. ಈ ವೇಳೆ ಸಿಇಓ ಅವರು ಮಾತನಾಡಿ, ರಾಯಚೂರು ಗ್ರಾಮೀಣಾಭಿವೃದ್ಧಿ ತ್ರೈಮಾಸಿಕ ಪತ್ರಿಕೆಯು ಜಿಲ್ಲೆಯ ಸಾಧನೆಗಳು ಹಾಗೂ ಅಭಿವೃದ್ಧಿ ಪ್ರಯತ್ನಗಳ ಸಮಗ್ರ ಚಿತ್ರಣ ನೀಡುತ್ತದೆ ಎಂದರು.**

ಶಾಲಾ ಮಕ್ಕಳು, ಮಹಿಳೆಯರು, ರೈತರು, ಕಾರ್ಮಿಕರು ಹಾಗೂ ವಿಶೇಷ ಚೇತನರ ಕಲ್ಯಾಣ–



ಕ್ಕಾಗಿ ಜಾರಿಗೊಂಡಿರುವ ವಿವಿಧ ಕಾರ್ಯಕ್ರಮಗಳು, ಜಿಲ್ಲೆಯ ಶಿಕ್ಷಣ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ಪ್ರತಿಬಿಂಬಿಸುತ್ತವೆ ಎಂದರು. ಜಿಲ್ಲೆಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಸರ್ಕಾರದ ವಿವಿಧ ಯೋಜನೆಗಳು ಮಹತ್ವದ ಪಾತ್ರ ವಹಿಸಿವೆ. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಯಡಿ ಸಂಜೀವಿನಿ ಮಾರ್ಟ್, ಅಕ್ಕ–ಕಫೆ, ಕುಕ್ಕುಟ ಮತ್ತು ಮತ್ಸ್ಯ ಸಂಜೀವಿನಿ ಘಟಕಗಳ ಮೂಲಕ ಸ್ವ–ಸಹಾಯ ಗುಂಪಿನ ಮಹಿಳೆಯರಿಗೆ ಉದ್ಯೋಗಾವಕಾಶ ಹಾಗೂ ಆರ್ಥಿಕ ಸ್ವಾವಲಂಬನೆ ಒದಗಿಸಲಾಗಿದೆ. ಮಹಿಳೆಯರಿಗೆ ಸೂಕ್ತ ತರಬೇತಿ ನೀಡಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವ ಈ ಕಾರ್ಯ ಶ್ಲಾಘನೀಯವಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಗ್ರಾಮೀಣ ಕುಟುಂಬಗಳಿಗೆ ವರ್ಷಕ್ಕೆ 100 ದಿನಗಳ ಉದ್ಯೋಗ ಭದ್ರತೆ ಒದಗಿಸಲಾಗುತ್ತಿದ್ದು, ಗ್ರಾಮೀಣ ಜೀವನೋಪಾಯ ಸುಧಾರಣೆ ಹಾಗೂ ಆಸ್ತಿ ಸೃಜನೆಯಲ್ಲಿ ಇದು ಪರಿಣಾಮಕಾರಿ ಸಹಕಾರ ನೀಡುತ್ತಿದೆ. ಸ್ವಚ್ಛ ಭಾರತ ಮಿಷನ್ ಯೋಜನೆಯಡಿಯಲ್ಲಿ ಸ್ವಚ್ಛ ಸಂಕೀರ್ಣಗಳು, ಸಮುದಾಯ ಹಾಗೂ ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮತ್ತು ಘನ ತ್ಯಾಜ್ಯ ವಿಲೇವಾರಿ ಘಟಕಗಳ ಸ್ಥಾಪನೆಯಿಂದ ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಮತ್ತು ಸ್ವಚ್ಛತೆಯಲ್ಲಿ ಗಮನಾರ್ಹ ಪ್ರಗತಿ ಕಂಡುಬಂದಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಯೋಜನಾ ನಿರ್ದೇಶಕರಾದ ಶರಣಬಸವರಾಜ ಕೆ., ಮುಖ್ಯ ಯೋಜನಾಧಿಕಾರಿ ಡಾ.ಟಿ ರೋಣಿ, ಮುಖ್ಯ ಲೆಕ್ಕಾಧಿಕಾರಿ ವಿಜಯ ಶಂಕರ, ಸಹಾಯಕ ಕಾರ್ಯದರ್ಶಿ ರಾಘವೇಂದ್ರ ಸೇ–ರಿದಂತೆ ಇನ್ನಿತರ ಅಧಿಕಾರಿ ಸಿಬ್ಬಂದಿ ಇದ್ದರು.

## ಸಾಹಿತ್ಯ ಸಿಂಚನ

ಸತ್ಯ
ಸತ್ಯವು ಬೆಳಕಿನ ಕಿರಣದಂತೆ,
ಅಂಧಕಾರದೊಳಗೆ ದಾರಿ ತೋರಿಸುವಂತೆ.
ಸುಳ್ಳಿನ ಮೋಡಗಳ ನಡುವೆ,
ನಿತ್ಯವೂ ಹೊಳೆಯುವ ಸೂರ್ಯನಂತೆ.


ಸತ್ಯವು ಶಕ್ತಿ, ಸತ್ಯವು ಧೈರ್ಯ,
ಮನದಾಳದ ನಿಜವಾದ ಐಶ್ವರ್ಯ.
ಕಾಲ ಬದಲಾಗಿದರೂ ಅದು ಬದಲಾಗದು,
ಯಾವುದೇ ಸಂಕಷ್ಟದಲ್ಲೂ ತಗ್ಗುವುದಿಲ್ಲದು.


ಸತ್ಯದ ದಾರಿ ಕೆಲವೊಮ್ಮೆ ಕಠಿಣ,
ಆದರೂ ಅದೇ ಜೀವನದ ನಿಜವಾದ ಪಥ.
ಸುಳ್ಳು ಕೆಲಕಾಲ ಗೆಲ್ಲಬಹುದು,
ಸತ್ಯ ಮಾತ್ರ ಶಾಶ್ವತವಾಗಿ ನಿಲ್ಲಬಹುದು.

ನಾವು ನಡೆವ ದಾರಿಯಲ್ಲಿ ಸತ್ಯ ಇರಲಿ,
ನಮ್ಮ ಮಾತುಗಳಲ್ಲಿ ನಂಬಿಕೆ ಮೂಡಲಿ.
ಸತ್ಯವೇ ಜೀವನದ ನಿಜವಾದ ಗೆಲುವು,
ಅದರಲ್ಲೇ ಇದೆ ನಿಜವಾದ ಸಂತೋಷವು. ?

**ರಮೇಶ್**

# ಅಭಿಮನ್ಯು ದತ್ತಿ ಪ್ರಶಸ್ತಿ ಪುರಸ್ಕೃತ ಪತ್ರಕರ್ತ ಚಂದ್ರಶೇಖರ ಬೆನ್ನೂರು ಅವರಿಗೆ ಶಾಸಕ ಹಂಪನಗೌಡ ಬಾದರ್ಲಿ ಅವರಿಂದ ಅಭಿನಂದನೆ



**ನೈಜ್ಯ ದೆಸೆ ನ್ಯೂಸ್**

ಸಿಂಧನೂರು: ಕರ್ನಾಟಕ ಸರ್ಕಾರದ ಮಾಧ್ಯಮ ಅಕಾಡೆಮಿಯ ಪ್ರತಿಷ್ಠಿತ ಅಭಿಮನ್ಯು ದತ್ತಿ ಪ್ರಶಸ್ತಿಯನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಸ್ವೀಕ-ರಿಸಿದ ವಿಜಯ ಕರ್ನಾಟಕ ಪತ್ರಿಕೆಯ ಹಿರಿಯ ವರದಿಗಾರರಾದ ಚಂದ್ರಶೇಖರ ಬೆನ್ನೂರು ಅವರನ್ನು ಸಿಂಧನೂರು ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಆತ್ಮೀಯವಾಗಿ ಸನ್ಮಾನಿಸಿ, ಗೌರವಿಸಿದರು.

ಇಂದು ಪತ್ರಿಕಾ ಭವನದಲ್ಲಿ ನಡೆದ ಅಭಿನಂದನಾ ಸಮಾರಂಭದಲ್ಲಿ ಶಾಸಕರು ಚಂದ್ರಶೇಖರ ಬೆನ್ನೂರು ಅವರಿಗೆ ಶಾಲು ಹೊದಿಸಿ, ಸ್ಮರಣಿಕೆ ನೀಡಿ ಗೌರವಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಹಂಪನಗೌಡ ಬಾದರ್ಲಿ ಅವರು ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು:"ಸಿಂಧನೂರು ತಾಲೂಕಿನ ಪತ್ರಕರ್ತರೊಬ್ಬರು ರಾಜ್ಯ ಮಟ್ಟದ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾಗಿರುವುದು ಇಡೀ ಕ್ಷೇತ್ರಕ್ಕೆ ಹೆಮ್ಮೆಯ ವಿಷಯವಾಗಿದೆ. ಬೆನ್ನೂರು ಅವರ ದಶಕಗಳ ಪತ್ರಿಕಾ ವೃತ್ತಿ ಮತ್ತು ಜನಪರ ಕಾಳ-ಜಿಗೆ ಸಂದ ಗೌರವ ಇದಾಗಿದೆ.","ಸಮಾಜದ ಅಂಕುಡೊಂಕುಗಳನ್ನು ತಿದ್ದುವಲ್ಲಿ ಮತ್ತು ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಪತ್ರಿಕೆಗಳ ಪಾತ್ರ ದೊಡ್ಡದು.

ಚಂದ್ರಶೇಖರ ಬೆನ್ನೂರು ಅವರು ಸದಾ ಕ್ರಿಯಾಶೀಲರಾಗಿದ್ದು, ವೃತ್ತಿಪರತೆ ಮೆರೆದಿದ್ದಾರೆ," ಎಂದು ಶಾಸಕರು ಶ್ಲಾಘಿಸಿದರು. ರಾಜ್ಯ ಪತ್ರಿಕಾ ಅಕಾಡೆಮಿಯು ನೀಡುವ 'ಅಭಿಮನ್ಯು ದತ್ತಿ ಪ್ರಶಸ್ತಿ'ಯು ಗ್ರಾಮೀಣ ಭಾಗದ ಸಮಸ್ಯೆಗಳನ್ನು ಗುರುತಿಸಿ, ಜನಸಾಮಾನ್ಯರ ಧ್ವನಿಯಾಗಿ ಕೆಲಸ ಮಾಡುವ ಪತ್ರಕರ್ತ-ರಿಗೆ ನೀಡಲಾಗುವ ಮಹತ್ವದ ಪ್ರಶಸ್ತಿಯಾಗಿದೆ. ಚಂದ್ರಶೇಖರ ಬೆನ್ನೂರು ಅವರು ಕಳೆದ ಹಲವು ವರ್ಷಗಳಿಂದ ಸಿಂಧನೂರು ಭಾಗದ ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಿ ಕೆಲಸ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು,ಪತ್ರಿಕಾ ಬಳಗದ ಸ್ನೇಹಿತರು ಉಪಸ್ಥಿತರಿದ್ದರು.

# ನೂತನ ಜಿಲ್ಲಾ ಕಾರ್ಯದರ್ಶಿ ಮುಜಾಹಿದ್ ಮರ್ಚೆಡ್ ಅವರಿಂದ ಶಾಸಕ ದದ್ದಲ್ ಅವರಿಗೆ ಯುಗಾದಿ ಶುಭಾಶಯ

**ನೈಜ್ಯ ದೆಸೆ ನ್ಯೂಸ್**



ರಾಯಚೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬಾರ್ ಅವರ ಆದೇಶದ ಮೇರೆಗೆ, ಹಾಗೂ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಶ್ರೀ ಬಸನಗೌಡ ದದ್ದಲ್ ಅವರ ಶಿಫಾರಸ್ಸಿನ ಆಧಾರದ ಮೇಲೆ, ಮೊಹಮ್ಮದ್ ಮುಜಾಹಿದ್ ಮರ್ಚೆಡ್ ಅವರನ್ನು ರಾಯಚೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತ ವಿಭಾಗದ ಜಿಲ್ಲಾ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.

ನೂತನವಾಗಿ ಜವಾಬ್ದಾರಿ ವಹಿಸಿಕೊಂಡ ಮುಜಾಹಿದ್ ಮರ್ಚೆಡ್ ಅವರು ತಮ್ಮ ಬೆಂಬಲಿಗರೊಂದಿಗೆ ಶಾಸಕ ಬಸನಗೌಡ ದದ್ದಲ್ ಅವರನ್ನು ಭೇಟಿಯಾಗಿ ಯುಗಾದಿ ಹಬ್ಬದ ಶುಭಾಶಯಗಳನ್ನು ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಶಾಸಕ ದದ್ದಲ್ ಅವರು ಎಲ್ಲರಿಗೂ ಮುಂಚಿತವಾಗಿ ರಂಜಾನ್ ಹಬ್ಬದ ಶುಭಾಶಯಗಳನ್ನು ಕೋರಿದರು. ಈ ಮೊದಲು ಮುಜಾಹಿದ್ ಮರ್ಚೆಡ್ ಅವರು ದೇವಸೂಗೂರು ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ, ಪಕ್ಷನಿಷ್ಠೆ ಹಾಗೂ ಸಾಮಾಜಿ-ಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ ಜಿಲ್ಲಾ ಮಟ್ಟದ ಜವಾಬ್ದಾರಿಯನ್ನು ನೀಡಲಾಗಿದೆ ಎಂದು ಶಾಸಕ ದದ್ದಲ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಸೈಯದ್ ಸಾಬ್ ಮನ್ಸಲಾಪೂರು, ಬಷೀರ್ ಅಹ್ಮದ್ ಹಳ್ಳಿ, ಎಪಿಎಂಸಿ ಉಪಾಧ್ಯಕ್ಷರು, ಮಲ್ಲಿಕಾರ್ಜುನ ನಾಯಕ್, ಡಾ. ತಬರೇಜ್, ಸಾದಿಕ್ ಕಾಡ್ಲೂರು, ದೌಲತ್ ಗಣಮೂರು, ಮಹೇಬೂಬ್ ಮರ್ಚೆಡ್, ಗೌಸ್ ಪಟೇಲ್, ಬಾಬು ಖಾದ್ರಿ, ಮಾಸೂಮ್ ಶರೀಫ್, ಮೈನು, ಅನ್ವರ್ ಶೇಖ್, ಶೇಖ್ ಹಸನ್, ರಫಿ ಬುಲೆಟ್, ಫಯಾಜ್ ನವಲಕಲ್, ನಿಜಾಮ್ ಮರ್ಚೆಡ್, ಸಮೀರ್, ಮೊಹಮ್ಮದ್ ಇಸ್ಮಾಯಿಲ್, ಯಾಸೀನ್ ಸೇ-ರಿದಂತೆ ಅನೇಕರು ಉಪಸ್ಥಿತರಿದ್ದರು.

## ಖಿಲಾರಹಟ್ಟಿಯಲ್ಲಿ ಬೀರಲಿಂಗೇಶ್ವರ? ಕಾಡಸಿದ್ಧೇಶ್ವರ ಜಾತ್ರೆ ಇಂದಿನಿಂದ

**ನೈಜ್ಯ ದೆಸೆ ನ್ಯೂಸ್**

**ಮುದ್ದೇಬಿಹಾಳ: ತಾಲ್ಲೂಕಿನ ಖಿಲಾರಹಟ್ಟಿ ಗ್ರಾಮದಲ್ಲಿ ಆರಾಧ್ಯ ದೈವಗಳಾದ ಶ್ರೀ ಬೀರಲಿಂಗೇಶ್ವರ ಹಾಗೂ ಶ್ರೀ ಕಾಡಸಿದ್ಧೇಶ್ವರರ ಜಾತ್ರಾ ಮಹೋತ್ಸವವು ಮಾರ್ಚ್ 20ರಿಂದ 22ರವರೆಗೆ ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಯಲಿದೆ ಎಂದು ಸಮಾಜಸೇವಕ ಹಾಗೂ ಅಹಲ್ಯಾಬಾಯಿ ಹೋಳ್ಕರ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಮಲ್ಲಿಕಾರ್ಜುನ ಮದರಿ ತಿಳಿಸಿದ್ದಾರೆ.**



ಪಟ್ಟಣದ ಅಹಲ್ಯಾಬಾಯಿ ಹೋಳ್ಕರ್ ಬ್ಯಾಂಕ್‌ನ ಪಲ್ಲವಿ ಸಭಾಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 21 ವರ್ಷಗಳಿಂದ ಸುರಪುರ ತಾಲ್ಲೂಕಿನ ಮಾರನಾಳದ ಭೀರಪ್ಪ ದೇವಸ್ಥಾನದಲ್ಲಿ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ಬಾರಿಯೂ ಯುಗಾದಿ ಹಬ್ಬದ ಅಂಗವಾಗಿ ಕೂಲಿ ಕಾರ್ಮಿಕರು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದವ-ರಿಗೆ ನೆರವಾಗುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈಗಾಗಲೇ 21 ಜೋಡಿಗಳು ನೋಂದಾಯಿಸಿಕೊಂಡಿವೆ ಎಂದು ಹೇಳಿದರು. ಮಾರ್ಚ್ 20ರಂದು ಮಧ್ಯಾಹ್ನ 3 ಗಂಟೆಗೆ ಶ್ರೀ ಹುಲಿಗೇಮ್ಮದೇವಿ ದೇವಸ್ಥಾನದಿಂದ 9 ಪಲ್ಲಕ್ಕಿಗಳ ಮೆರವಣಿಗೆ ಆರಂಭವಾಗಿ ಶ್ರೀ ಬೀರಲಿಂಗೇಶ್ವರ ದೇವಸ್ಥಾನದವರೆಗೆ ಸಾಗಲಿದೆ. ಕುಂಭ ಹಾಗೂ ಡೊಳ್ಳಿನ ನಾದದೊಂದಿಗೆ ನಡೆಯುವ ಈ ಮೆರವಣಿಗೆ ಜಾತ್ರೆಗೆ ಚಾಲನೆ ನೀಡಲಿದೆ. ಅಂದೇ ರಾತ್ರಿ ಡೊಳ್ಳಿನ ಪದಗಳ ಕಾರ್ಯಕ್ರಮ ಜರುಗಲಿದೆ. ಮಾರ್ಚ್ 21ರಂದು ಮಧ್ಯಾಹ್ನ 12 ಗಂಟೆಗೆ ಉಚಿತ ಸಾಮೂಹಿಕ ವಿವಾಹ ಹಾಗೂ ಸರ್ವಧರ್ಮ ಸಭೆ ನಡೆಯಲಿದ್ದು, ಕಾರ್ಯಕ್ರಮವನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರು ಹಾಗೂ ಮುದ್ದೇಬಿಹಾಳ ಶಾಸಕರಾದ ಸಿ.ಎಸ್. ನಾಡಗೌಡ ಉದ್ಘಾಟಿಸಲಿದ್ದಾರೆ. ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ್ (ನಡಹಳ್ಳಿ), ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಗಂಗಾಧರ ಎಸ್. ನಾಡಗೌಡ ಹಾಗೂ ಕಾಂಗ್ರೆಸ್ ಮುಖಂಡ ಶಾಂತಗೌಡ ಎಸ್. ಪಾಟೀಲ ಜ್ಯೋತಿ ಬೆಳಗಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎನ್.ಎಸ್. ಪೂಜಾರಿ ವಹಿಸಲಿದ್ದಾರೆ. ಜಾತ್ರೆಯ ಅಂಗವಾಗಿ ಆಗತೀರ್ಥ ಶ್ರೀ ರೇವಣಸಿದ್ದೇಶ್ವರ ಮಹಾಸ್ವಾಮೀಜಿ, ಅಂಕಲಿಮಠದ ಶ್ರೀ ವೀರಭದ್ರ ಮಹಾಸ್ವಾಮೀಜಿ, ಸಿದ್ದನಕೊಳ್ಳದ ಶ್ರೀ ಶಿವಕುಮಾರ ಮಹಾಸ್ವಾಮಿಗಳು, ತಾಳಿಕೋಟೆಯ ಖಾಸಗತೇಶ್ವರ ಮಠದ ಶ್ರೀ ಬಾಲ ಶಿವಯೋಗಿ ಸಿದ್ದಲಿಂಗ ದೇವರು ಸೇರಿದಂತೆ ಅನೇಕ ಮಠಾಧೀಶರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಜಾತ್ರೆಯಲ್ಲಿ ಟಗರಿನ ಕಾಳಗ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆಯಲಿದ್ದು, ಮಾರ್ಚ್ 22ರಂದು ಬೆಳಿಗ್ಗೆ ರಂಗೋಲಿ ಸ್ಪರ್ಧೆ, ಮಧ್ಯಾಹ್ನ ತೆರಬಂಡಿ ಸ್ಪರ್ಧೆ ಹಾಗೂ ಸಂಜೆ ಖೋ-ಖೋ ಪಂದ್ಯಾವಳಿ ನಡೆಯಲಿದೆ. ವಿಜೇತರಿಗೆ ಬಹುಮಾನಗಳನ್ನು ನೀಡಲಾಗುತ್ತದೆ. ಪತ್ರಿಕಾಗೋಷ್ಠಿಯಲ್ಲಿ ವಾಯ್.ಎಚ್. ವಿಜಯಕರ ಅವರು ಮಲ್ಲಿಕಾರ್ಜುನ ಮದರಿ ಅವರ ಸಾಮಾಜಿಕ ಸೇವೆಯನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ಮಲ್ಲಣ್ಣ ಕೆಶರಟ್ಟಿ, ಬಿ.ಎಸ್. ಶಿರೋಳ, ಬಸವರಾಜ ಬಿಜೂರ, ಶಿಶಿ ನೆರಬೆಂಚಿ, ಬಸವರಾಜ ಗುಡಲಮನಿ, ಚಂದ್ರು ಜೋಗಿ, ಚಂದ್ರು ಗಣಾಚಾರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಜಾತ್ರಾ ಮಹೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.

# ನಾರಾಯಣಪುರ ಬಲದಂಡೆ ಕಾಲುವೆಗೆ ಏಪ್ರಿಲ್ 15ರವರೆಗೆ ನೀರು ಹರಿಸುವಂತೆ ಒತ್ತಾಯ ? ಮಾರ್ಚ್ 23ರಂದು ಧರಣಿ ಸತ್ಯಾಗ್ರಹ

**ನೈಜ್ಯ ದೆಸೆ ನ್ಯೂಸ್**



ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಸಮಿತಿ ದೇವದುರ್ಗ ಪದಾಧಿಕಾರಿಗಳು ಹಾಗೂ ರೈತ-ರಿಂದ ಪತ್ರಿಕಾಗೋಷ್ಠಿ ನಡೆಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ್ ಅವರು, ನಾರಾಯಣಪುರ ಬಲದಂಡೆ ಕಾಲುವೆಗೆ ಏಪ್ರಿಲ್ 15ರವರೆಗೆ ನೀರು ಹರಿಸಲು ಆಗ್ರಹಿಸಿ ದಿನಾಂಕ 23-03-2026ರಂದು ಜಾಲಹಳ್ಳಿಯ ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ನಾರಾಯಣಪುರ ಬಲದಂಡೆ ಕಾಲುವೆ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶದಲ್ಲಿ ಶೇಂಗಾ, ಸಜ್ಜೆ, ಮೆಣಸಿನಕಾಯಿ, ಭತ್ತ ಸೇ-ರಿದಂತೆ ಹಲವು ಬೆಳೆಗಳು ಕಟಾವಿನ ಹಂತದಲ್ಲಿದ್ದು, ರೈತರ ಹಿತದೃಷ್ಟಿಯಿಂದ ನೀರು ಅತ್ಯಾವಶ್ಯಕವಾಗಿದೆ ಎಂದು ಹೇಳಿದರು. ಸರ್ಕಾರ ತಕ್ಷಣ ನೀರಾವರಿ ಸಲಹಾ ಸಮಿತಿ ಸಭೆ ಕರೆಯಬೇಕು ಮತ್ತು ರೈತರ ಬೆಳೆಗಳನ್ನು ರಕ್ಷಿಸುವ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಅವರು ಆಲಮಟ್ಟಿ ಡ್ಯಾಂ ಎತ್ತರಿಸುವ ವಿಷಯದ ಕುರಿತು ಮಾತನಾಡಿ, ಸುಪ್ರೀಂ ಕೋರ್ಟ್ ಆದೇಶ ಇದ್ದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿದರು. ಆಂಧ್ರಪ್ರದೇಶ ಮತ್ತು ತೆಲಂಗಾಣ ಸರ್ಕಾರಗಳ ತಡೆಯನ್ನೂ ಉಲ್ಲೇಖಿಸಿ, ಎಲ್ಲಾ ಕಾನೂನು ತೊಡಕುಗಳನ್ನು ನಿವಾರಿಸಿ ಡ್ಯಾಂ ಎತ್ತರಿಸುವಂತೆ ಒತ್ತಾಯಿಸಿದರು.

ರೈತರಾದ ಸಿದ್ದಪ್ಪ ಗುಮ್ಮದ್ರ ಅವರು, "ಏಪ್ರಿಲ್ 15ರವರೆಗೆ ನೀರು ಹರಿಸಿದರೆ ಮಾತ್ರ ಬೆಳೆ ಕೈಗೆ ಬರುತ್ತದೆ, ಇಲ್ಲವಾದರೆ ರೈತರಿಗೆ ಸಂಕಷ್ಟ ಎದುರಾಗುತ್ತದೆ" ಎಂದು ತಿಳಿಸಿದರು. ಭೀಮಣ್ಣ ಡಂಗಿ ಅವರು ಮಾತನಾಡಿ, "ಸಾಲ ಮಾಡಿ ಬೆಳೆದ ಬೆಳೆಗಳು ನೀರಿಲ್ಲದೆ ಹಾಳಾದರೆ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ" ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಮಾರ್ಚ್ 23ರಂದು ನಡೆಯುವ ಧರಣಿ ಸತ್ಯಾಗ್ರಹಕ್ಕೆ ರೈತರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬೆಂಬಲ ನೀಡಬೇಕು ಎಂದು ರೈತ ಮುಖಂಡರು ಮನವಿ ಮಾಡಿದರು.


ಈ ಸಂದರ್ಭದಲ್ಲಿ ನರಸಣ್ಣ ನಾಯಕ್, ಹನುಮಂತ ಗುರಿಕಾರ್, ಮೌನೇಶ್, ಶಿವರಾಜ್ ಯರಕಮಟ್ಟಿ, ಭೀಮಣ್ಣ ಡಂಗಿ, ಹನುಮಂತ ಮಡಿವಾಳ ಸೇರಿದಂತೆ ಹಲವರು ಹಾಗೂ ಸಾರ್ವಜನಿಕರು ಹಾಜರಿದ್ದರು.

# ಇಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಎನ್. ಎಸ್. ಬೋಸರಾಜು ಅವರ ರಾಯಚೂರು ಜಿಲ್ಲಾ ಪ್ರವಾಸ ಕಾರ್ಯಕ್ರಮ

**ನೈಜ್ಯ ದೆಸೆ ನ್ಯೂಸ್**

ರಾಯಚೂರು: ಸನ್ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್.ಎಸ್. ಬೋಸರಾಜು ಅವರು ದಿನಾಂಕ 21.03.2026 ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಅವರ ಕಾರ್ಯಕ್ರಮದ ವಿವರಗಳು ಈ ಕೆಳಗಿನಂತಿವೆ: 1.ಬೆಳಿಗ್ಗೆ 09.00 ಗಂಟೆಗೆ: ರಾಯಚೂರು ನಗರದ ಸ್ಥಳೀಯ ಕಾರ್ಯಕ್ರಮಗಳಲ್ಲಿ ಹಾಗೂ ರಂಜಾನ್ ಹಬ್ಬದ ಪ್ರಯುಕ್ತ ಏರ್ಪಡಿಸಲಾದ ಕಾರ್ಯಕ್ರಮಗಳಲ್ಲಿ ಭಾಗಿ. (ಸ್ಥಳ: ರಾಯಚೂರು), 2. ಬೆಳಿಗ್ಗೆ 11.00 ಗಂಟೆಗೆ: ಮಾನ್ವಿ ಪಟ್ಟಣ-



ಕ್ಕೆ ಆಗಮನ, 3. ಬೆಳಿಗ್ಗೆ 11.00 ಗಂಟೆಗೆ: ಮಾನ್ವಿ ಪಟ್ಟಣಕ್ಕೆ ಆಗಮನ, 4. ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ: ಮಾನ್ವಿಯ ಸ್ಥಳೀಯ ಕಾರ್ಯಕ್ರಮಗಳಲ್ಲಿ ಹಾಗೂ ರಂಜಾನ್ ಹಬ್ಬದ ಕಾರ್ಯಕ್ರಮಗಳಲ್ಲಿ ಭಾಗಿ. (ಸ್ಥಳ: ಮಾನ್ವಿ, ಜಿಲ್ಲೆ: ರಾಯಚೂರು), 5. ಮಧ್ಯಾಹ್ನ 12.30 ಗಂಟೆಗೆ: ಮಾನ್ವಿಯಿಂದ ಬೆಂಗಳೂ-ರಿಗೆ ಪ್ರಯಾಣ. (ಮಾರ್ಗ: ಸಿಂಧನೂರು, ಗಂಗಾವತಿ, ಹೊಸಪೇಟೆ, ಚಿತ್ರದುರ್ಗ, ತುಮಕೂರು ಮೂಲಕ)., 6.ಸಂಜೆ 06.00 ಗಂಟೆಗೆ: ಬೆಂಗಳೂರಿಗೆ ತಲುಪಲಿದ್ದಾರೆ. ಸಚಿವರ ಈ ಪ್ರವಾಸದ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಾರ್ವಜನಿಕರು ಉಪಸ್ಥಿತ-ರಿರಬೇಕೆಂದು ಈ ಮೂಲಕ ತಿಳಿಸಲಾಗಿದೆ.

# ಕಾರುಣ್ಯಾಶ್ರಮದಲ್ಲಿ ಪವಿತ್ರ ರಂಜಾನ್ ಹಬ್ಬ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ತಾಲೂಕಿನ ರವಡಕುಂದ ಗ್ರಾಮದ ಸಯ್ಯದ್ ಪೀರ್ ಪಾಷಾ ಖಾಜಿ ಇವರ ಕುಟುಂಬದಿಂದ ಪ್ರತಿ ವರ್ಷದ ಪದ್ಧತಿಯಂತೆ ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿರುವ ಆಶ್ರಯದಾತರುಗಳಿಗೆ ಹೊಸ ಬಟ್ಟೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸಿ ಮಹಾಪ್ರಸಾದ ಸೇವೆ ಸಲ್ಲಿಸಿದರು.**






ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರನ್ನು ಅವರ ಕುಟುಂಬದಿಂದ ಸನ್ಮಾನಿಸಿ ಗೌರವಿಸಿದರು. ನಂತರ ಆಶ್ರಮದ ಕಾರ್ಯಧ್ಯಕ್ಷರಾದ ಡಾ. ಚನ್ನಬಸವಸ್ವಾಮಿ ಹಿರೇಮಠ ಮಾತನಾಡಿ ನಮ್ಮ ರವಡಕುಂದ ಗ್ರಾಮದ ಸಯ್ಯದ್ ಪೀರ್ ಪಾಷಾ ಖಾಜಿ ಧಣಿಯವರು ಪ್ರತಿ ವರ್ಷವೂ ಕೂಡ ಪವಿತ್ರ ರಂಜಾನ್ ಹಬ್ಬವನ್ನು ಕಾರುಣ್ಯ ಆಶ್ರಮದಲ್ಲಿ ವಿಶೇಷ ಸೇವೆ ಸಲ್ಲಿಸುವುದರ ಮೂಲಕ ಮಾಡಿ ಕಾರುಣ್ಯಾಶ್ರಮದ ಬಹುದೊಡ್ಡ ಶಕ್ತಿಯಾಗಿದ್ದಾರೆ. ಬರೀ ಹಬ್ಬ ಹ-ರಿದಿನಗಳಲ್ಲಿ ಅಲ್ಲದೆ ಆಶ್ರಮದ ಕಷ್ಟಕ್ಕೆ ನಿರಂತರ ಸಹಾಯ ಸಹಕಾರ ನೀಡುತ್ತಾ ಬಂದಿದ್ದಾರೆ. ಇವರ ಮಾರ್ಗದರ್ಶನ ನಿರಂತರವಾಗಿ ಕಾರುಣ್ಯ ಆಶ್ರಮಕ್ಕೆ ದೊರೆಯುತ್ತಿರುವುದು ನಮಗೆ ಇನ್ನೂ ಹೆಚ್ಚಿನ ಸೇವೆ ಮಾಡಲು ಅನುಕೂಲವಾಗುತ್ತಿದೆ.

ಪ್ರವಾದಿ ಮೊಹಮ್ಮದ್ ಪೈಗಂಬರ್ ಅವರು ಮಾನವ ಧರ್ಮಕ್ಕೆ ಮಾದರಿಯಾಗಿರುವಂತಹ ಮಹಾನ್ ಶರಣರು ಮಾನವರಲ್ಲಿ ನಂಬಿಕೆ ಪ್ರೀತಿ ವಿಶ್ವಾಸ ಸೇವೆ ಮಾಡುವುದರಲ್ಲೇ ತಾವು ದೇವರನ್ನು ಕಾಣಬಹುದು ಖುರಾನ್ ಗ್ರಂಥವು ಯಾವುದೇ ಜಾತಿ ಧರ್ಮಗಳಿಗೆ ಮೀಸಲಿಲ್ಲದೆ ಮಾನವನ ಸಂಸ್ಕೃತಿ ಸಂಸ್ಕಾರದ ಒಂದು ಅಧ್ಯಯನವಾಗಿದೆ ಎಂದು ಹೇಳಿರುವುದು ಪ್ರತಿಯೊಬ್ಬರೂ ಕೂಡ ಖುರಾನ್ ಗ್ರಂಥವನ್ನು ಪಠಣ ಮಾಡಬಹುದು. ಸುಮಾರು ವರ್ಷಗಳಿಂದ ಸಿಂಧನೂರಿನ ಜಮಾಆತೆ ಇಸ್ಲಾಮಿ ಹಿಂದ್ ನ ಗುರು ಹಿರಿಯರು ಕಾರುಣ್ಯ ಆಶ್ರಮಕ್ಕೆ ಕನ್ನಡ ಖುರಾನ್ ನೀಡಿ ಗೌರವಿಸಿದ್ದಾರೆ. ಭಗವದ್ಗೀತೆ ಖುರಾನ್ ಬೈಬಲ್ ಈ ಮೂರು ಗ್ರಂಥಗಳು ಹಸಿದವರಿಗೆ ಹಸಿವು ನೀಗಿಸು ಕಷ್ಟದಲ್ಲಿರುವವ-ರಿಗೆ ಕೈ ಹಿಡಿದು ಮುನ್ನಡೆಸು ನ್ಯಾಯಪರವಾದ ನಿಲುವುಗಳನ್ನು ಸ್ವೀಕರಿಸು ಎನ್ನುವ ಹಲವಾರು ಸಂದೇಶಗಳನ್ನು ಮಾನವರಿಗೆ ತಿಳಿಯಪಡಿಸುತ್ತವೆ.

ಪವಿತ್ರ ರಂಜಾನ್ ಹಬ್ಬವು ಬರಿ ಇಸ್ಲಾಂ ಧರ್ಮದವರಿಗಷ್ಟೇ ಅಲ್ಲ ಪ್ರತಿಯೊಬ್ಬ ಮಾನವರು ಕೂಡ ಈ ಹಬ್ಬವನ್ನು ಆಚರಿಸಿದರೆ ಮಾನವೀಯತೆಗೆ ಸಂಪೂರ್ಣ ಅರ್ಥ ಸಿಗುತ್ತದೆ. ನಮ್ಮ ರವಡಕುಂದ ದಣಿಯವರು ಪ್ರತಿಯೊಬ್ಬ ಸಮಾಜದ ಗುರುಹಿ-ರಿಯರ ಪ್ರೀತಿ ವಿಶ್ವಾಸವನ್ನು ಗಳಿಸಿ ನಮ್ಮಂತಹ ನೊಂದ ಜೀವಿಗಳ ನಾಡಿಮಿಡಿತವಾಗಿದ್ದಾರೆ ಎಂದು ಭಾವನಾತ್ಮಕವಾಗಿ ಮಾತನಾಡಿ ಸಮಸ್ತ ಇಸ್ಲಾಂ ಬಂಧುಗಳಿಗೆ ಮತ್ತು ನಾಡಿನ ಜನತೆಗೆ ಪವಿತ್ರ ರಂಜಾನ್ ಹಬ್ಬದ ಶುಭಾಶಯಗಳನ್ನು ಕೋರಿದರು. ಈ ಕಾರ್ಯಕ್ರಮದಲ್ಲಿ ಸಯ್ಯದ್ ನಬಿಲ್ ಖಾಜಿ. ಖಾದರ್ ಭಾಷಾ. ಸೈಯದ್ ಬಷೀರ್ ಪಾಷಾ. ಹಾಗೂ ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಮೀನಾಕ್ಷಮ್ಮ. ಲಕ್ಷ್ಮಿ. ಜ್ಯೋತಿ. ಹಾಗೂ ಹಲವಾರು ಇಸ್ಲಾಂ ಧರ್ಮದ ಗುರುಹಿರಿಯರುಗಳು ಭಾಗವಹಿಸಿದ್ದರು

## ನೇಮಕಾತಿ ಪ್ರಕಟಣೆ

DHFWS ಕೊಪ್ಪಳ ನೇಮಕಾತಿ 2026: 6 ಕ್ಲಿನಿಕಲ್ ಸೈಕಾಲಜಿಸ್ಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘವು ಕೊಪ್ಪಳದಲ್ಲಿ ಮಾರ್ಚ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಕ್ಲಿನಿಕಲ್ ಸೈಕಾಲಜಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕೊಪ್ಪಳ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 25–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಅಧಿಕೃತ ವೆಬ್‌ಸೈಟ್: koppal.nic.in

## ಟಿಬಿ ಡ್ಯಾಂನ ಕ್ರಸ್ಟ್ ಗೇಟ್ ಗಳ ಅಳವಡಿಕೆ ಮೇ ತಿಂಗಳ ಅಂತ್ಯಕ್ಕೆ ಪೂರ್ಣ: ಶಾಸಕ ಹಂಪನಗೌಡ ಬಾದರ್ಲಿ

ನೈಜ್ಯ ದೆಸೆ ನ್ಯೂಸ್

**ತುಂಗಭದ್ರಾ ಜಲಾಶಯಕ್ಕೆ ಹೊಸಗೇಟ್ ಅಳವಡಿಕೆ ಕಾರ್ಯವು ಭರದಿಂದ ಸಾಗಿದ್ದು, ಮೇ ಅಂತ್ಯದೊಳಗೆ ಸಂಪೂರ್ಣವಾಗಿ ತುಂಗಭದ್ರಾ ಜಲಾಶಯದ ಎಲ್ಲಾ 33 ಕ್ರಸ್ಟ್ ಗೇಟ್ ಗಳನ್ನು ಸಂಪೂರ್ಣವಾಗಿ ಅತ್ಯಂತ ಜಾಗೂರುಕತೆಯಿಂದ ಅಳವಡಿಸಲಾಗುತ್ತದೆ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.**




ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ತುಂಗಭದ್ರಾ ಡ್ಯಾಂನ 33 ಕ್ರಸ್ಟ್ ಗೇಟ್ ಗಳಲ್ಲಿ ಈಗಾಗಲೇ 18 ಗೇಟ್ ಗಳನ್ನು ಕೂಡಿಸಿ ಶೇ.90ರಷ್ಟು ಪೂರ್ಣಗೊಳಿಸಿದ್ದಾರೆ. ಇನ್ನುಳಿದ ಕ್ರಸ್ಟ್ ಗೇಟ್ ಗಳ ಕಾಮಗಾರಿ ಪ್ರಗತಿಯಲ್ಲಿದೆ. ಎಪ್ರಿಲ್ 15 ರೊಳಗೆ ಸಂಪೂರ್ಣ ಗೇಟ್ ಅಳವಡಿಕೆ ಕಾರ್ಯವು ಪೂರ್ಣಗೊಂಡು ಮೇ.15ರವರೆಗೆ ಚೈನ್ ಅಳವಡಿಸಿ ಮೇ ತಿಂಗಳ ಅಂತ್ಯಕ್ಕೆ ಗೇಟ್ ಕಾರ್ಯ ಮುಗಿಯಲಿದೆ. ತುಂಗಭದ್ರಾ ಎಡದಂಡೆಯ ಮುಖ್ಯ ಕಾಲುವೆ 13ನೇ ಮೈಲ್ ಬಸ್ಸಾಪುರ ಹತ್ತಿರ ಕಾಲುವೆ ಹೊಡೆದಿದ್ದು, ಕುಡಿಯುವ ನೀರಿನ ಕೆರೆಗಳನ್ನು ತುಂಬಿಸಿಕೊಳ್ಳಲು ಸಮಸ್ಯೆ ಉದ್ಭವಿಸಿದೆ. ಈಗಾಗಲೇ ಕೆಲವು ದಿನಗಳ ಹಿಂದೆ ಸಿಂಧನೂರು ತಾಲೂಕು ಪಂಚಾಯತಿಯ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ, ಕೆರೆಗಳನ್ನು ತುಂಬಿಸಿಕೊಳ್ಳಲು ಸೂಚನೆ ನೀಡಲಾಗಿತ್ತು. ಅದರಂತೆ ಜಿಲ್ಲಾ ಅಧಿಕಾರಿಗಳ ಮೂಲಕ ಗುಲ್ಬರ್ಗ ವಿಭಾಗೀಯ ಆಯುಕ್ತರ ಮೂಲಕ ಕಾಲುವೆಗೆ ನೀರು ಹರಿಸಲು ಆದೇಶ ಮಾಡಲಾಗಿತ್ತು. ಆದರೆ ಮುಖ್ಯ ಕಾಲುವೆ ಹೊಡೆದಿದ್ದರಿಂದ ಕಾಲುವೆ ದುರಸ್ತಿಗೆ ಕನಿಷ್ಟ ಒಂದು ತಿಂಗಳಾದರೂ ಸಮಯ ಬೇಕು. ಈಗಾಗಲೇ ರಾಯಚೂರು ಜಿಲ್ಲೆಯಾದ್ಯಂತ ಕುಡಿಯುವ ನೀರಿನ ಸಮಸ್ಯೆ ಉಲ್ಬಣವಾಗಿದ್ದರಿಂದ ಕಾಲುವೆ ಹೊಡೆದ ಸ್ಥಳದಲ್ಲಿ ಕೆರೆಗಳಿಗೆ ನೀರು ತುಂಬುವವರೆಗೂ ಉಸುಕಿನ ಚೀಲಗಳನ್ನು ನಿರ್ಮಿಸಿ, 2000 ಕ್ಯೂಸೆಕ್ ನೀರನ್ನು ಕಾಲುವೆಗೆ ಹರಿಸುವ ಮೂಲಕ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ಈಗಾಗಲೇ ಕೊಪ್ಪಳ ಜಿಲ್ಲಾಧಿಕಾರಿ, ಹಾಗೂ ಐಸಿಸಿ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಲಾಗಿದೆ. (ಎಇಇ ಅಮರೇಶ ಅಮಾನತುಗೆ ಶಾಸಕರು ಒತ್ತಾಯ ಬಸ್ಸಾಪುರ ಹತ್ತಿರ ಎಡದಂಡೆ ಮುಖ್ಯ ಕಾಲುವೆಗೆ ನೀರು ಬಿಡುವ ಮುಂಚೆಯೇ ಬೋಂಗಾ ಬಿದ್ದಿದ್ದು, ಸ್ಥಳೀಯರು ಬೋಂಗಾ ಬಿದ್ದ ವಿಷಯವನ್ನು ವಡ್ಡರಹಟ್ಟಿ ವಿಭಾಗದ ಎಇಇ ಅಮರೇಶ ಅವರಿಗೆ ತಿಳಿಸಿದ್ದರೂ ಸಹ ನಿರ್ಲಕ್ಷ್ಯ ವಹಿಸಿದ ಕಾರಣ ಎಡದಂಡೆಯ ಮುಖ್ಯ ಕಾಲುವೆ ಹೊಡೆದಿದೆ. ಸ್ಥಳೀಯ ರೈತರು ತಿಳಿಸಿದಾಗ ಕ್ರಮ ಕೈಗೊಂಡಿದ್ದರೆ, ಈಗ ಇಂತಹ ಪರಿಸ್ಥಿತಿ ಬರುತ್ತಿರಲಿಲ್ಲ. ಕೂಡಲೇ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ನಿರ್ಲಕ್ಷ್ಯ ವಹಿಸಿರುವ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕೆಂದು ಒತ್ತಾಯಿಸಿದರು.) (ನಮ್ಮಲ್ಲಿ ಏಕಪಾತ್ರ ಅಭಿನಯ ಮಾಡುವ ಮಹಾನುಭಾವರು ಇದ್ದಾರೆ.? ರೌಡಕುಂದ ಗ್ರಾಮದಲ್ಲಿ ಇಪ್ಪತ್ತರಿಂದ ಮೂವತ್ತು ಜನರನ್ನು ಕೂಡಿಸಿ, ಪ್ರತಿಭಟನೆ ಮಾಡಿಸಿದವರು ಅವರೆ, ಮಂತ್ರಿಗಳ ಬಳಿ ಹೋಗಿ ಖರೀದಿ ಕೇಂದ್ರ ಪ್ರಾರಂಭ ಮಾಡುವಂತೆ ಹೇಳುವವರು ಅವರೆ, ಏಕಪಾತ್ರಾಭಿನಯ ಮಾಡುವ ಮಹಾನುಭಾವರು ನಮ್ಮಲ್ಲಿ ಇದ್ದಾರೆ. ಎಂದು ಶಾಸಕ ಹಂಪನಗೌಡ ಬಾದರ್ಲಿ ಅವರು ನಾಜೂಕಾಗಿಯೇ ತಿವಿದರು. ಈ ಮಹಾನುಭಾವ ಯಾರು ಎಂಬ ಪತ್ರಕರ್ತರ ಪ್ರಶ್ನೆಗೆ ಮಹಾನುಭಾವ ಎಂದೆ ಬರೆಯಿರಿ ಎಂದು ಶಾಸಕರು ಉತ್ತರಿಸಿದರು.) ಈ ಸಂದರ್ಭದಲ್ಲಿ: ಕಾಂಗ್ರೆಸ್ ಮುಖಂಡರಾದ ಖಾಜಿ ಮಲಿಕ್, ಮಲ್ಲನಗೌಡ ಮಾವಿನಮಡಗು, ರಂಗಾರೆಡ್ಡಿ, ಅಂಬ್ರೂಸ್, ವೀರೇಶ ಹಟ್ಟಿ, ರಾಮಣ್ಣ ಗೋನವಾರ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ನೈಜ್ಯ ದೆಸೆ**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**







## ಪಾತಾಪೂರು ನೂತನ ಶಿಲಾ ಮಂಟಪ ಉದ್ಘಾಟನೆ ದುರ್ಗಾ ದೇವಿಯ ಗುಡಿ ಪ್ರವೇಶ ವಿಶೇಷ ಪೂಜೆ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಲಕ್ಷ್ಮಣ ಭೋವಿ ಪಟ್ಟಣ ಸಮೀಪದ ಪಾತಾಪೂರು ಗ್ರಾಮದ ಗ್ರಾಮ ದೇವತೆಯಾದ ಶ್ರೀ ದುರ್ಗಾದೇವಿ ನೂತನ ಶಿಲಾ ಮಂಟಪ ಹಾಗೂ ದೇವಿಯ ಗುಡಿ ಪ್ರವೇಶ ಕಾರ್ಯಕ್ರಮ ವಿಶೇಷ ಪೂಜೆ ಪುರಾಸ್ಕಾರ ವಿಧಿ ವಿಧಾನಗಳ ಮೂಲಕ ಅದ್ದೂರಿಯಾಗಿ ಸಡಗರ ಸಂಭ್ರಮದಿಂದ ನೆರವೇರಿತು.**



ದೇವರಿಗೆ ವಿವಿಧ ರೀತಿಯ ಪೂಜೆ ಪುರಸ್ಕಾರ ನೆರವೇರಿಸಿ ಗ್ರಾಮದ ಆಂಜಿನೆಯ್ಯ ಸ್ವಾಮಿ ದೇವಸ್ಥಾನ ಅಗಸಿಯಿಂದ ಮೊದಲ್ಗೊಂಡು ಸುಮಂಗಲಿಯರು ಕುಂಬ ಕಳಸಗಳನ್ನೊತ್ತು ಸಾಗಿದರೆ , ಡೊಳ್ಳು ಬಾಜ ಬಜಂತ್ರಿಗಳೊಂದಿಗೆ ದೇವಿಯನ್ನು ತನು ಮನ ಭಕ್ತಿ ಭಾವದಿಂದ ರಥ–ದಲ್ಲಿ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಕರೆ ತರಲಾಯಿತು . ನಂತರ ನೂತನ ಶಿಲಾ ಮಂಟಪ ದೇವಸ್ಥಾನದ ಗರ್ಭ ಗುಡಿಯ ಒಳಗಡೆ ಶ್ರೀ ದುರ್ಗಾದೇವಿಯ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವ ಮೂಲಕ ಭವ್ಯವಾದ ನೂತನ ಶಿಲಾ ಮಂಟಪದ ದೇವಸ್ತಾನ ಉದ್ಘಾಟನೆಗೊಂಡಿತು .

ಶ್ರೀ ಅಭಿನವ ಸೋಮನಾಥ ಶಿವಾಚಾರ್ಯ ಮಹಾ ಸ್ವಾಮಿಗಳು ದೇವಿಗೆ ಪ್ರಾಣ ಪ್ರತಿಷ್ಠಾನ ಕಾರ್ಯಕ್ರಮ ನೆರವೆಸಿಕೊಟ್ಟರು . ಹೋಮ ಹವನ , ರುದ್ರಾಭಿಷೇಕ , ಮಹಾ ಮಂಗಳಾರತಿ ,ಜೋಡಿ ದಂಪತಿಗಳಿಂದ ಪೂಜೆ ಅನ್ನ ದಾಸೋಹ ಮುಂತಾದ ಧಾರ್ಮಿಕ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಶಾಸ್ತ್ರೋತ್ಸವವಾಗಿ ಮಾಡಲಾಯಿತು .

ಈ ಸಂಧರ್ಭದಲ್ಲಿ ಶ್ರೀ ಬಸವರಾಜಪ್ಪ ತಾತನವರು ಕಲ್ಲಂಗೇರಾ , ಶ್ರೀ ಅಯ್ಯಪ್ಪ ತಾತ ಹೀರಾ ( ವಜ್ರ ) ಶ್ರೀ ಶಿವಶಂಕ್ರಪ್ಪ ಪೂಜಾರಿ ಪಾತಾಪೂರು , ಪ್ರದಾನ ಅರ್ಚಕರಾದ ಅಂಬಣ್ಣ ಪೂಜಾರಿ , ತಿಪ್ಪಣ್ಣ ಪೂಜಾರಿ , ಚನ್ನಯ್ಯ ಸ್ವಾಮಿ , ಶಿವಯ್ಯಸ್ವಾಮಿ ಬಂಗ್ಲಿ , ಚೇತನ ಸ್ವಾಮಿ , ಸಣ್ಣಯ್ಯಪ್ಪ ಸ್ವಾಮಿ , ಸಿದ್ದನಗೌಡ ಪೋ.ಪಾಟೀಲ್ , ಅಮರೇಗೌಡ ಪೋ.ಪಾಟೀಲ್ ,ಅಯ್ಯನಗೌಡ ಪೋ.ಪಾಟೀಲ್ , , ಶರಣಪ್ಪ ಕೌತಾಳ , ಅಮರೇಶ್ ಗೌಡ ಮಲ್ಲದಗುಡ್ಡ , ಶರಣಪ್ಪ ಎಲ್‌ಐಸಿ , ಪತ್ರಕರ್ತ ಲಕ್ಷ್ಮಣ ಭೋವಿ , ರಾಜಶೇಖರ ಪಾಟೀಲ್ , ಮಲ್ಲಯ್ಯ ಬೆವಿನಗಿಡ , ಮೌನೇಶ ಕುಮನೂರು , ನಿಂಗಪ್ಪ ಕುಮನೂರು , ರಾಯಪ್ಪ ಹೊಸಮನಿ , ದೇವಣ್ಣ ಹೊಸಮನಿ , , ಮಲ್ಲಯ್ಯ ಪೂಜಾರಿ , ಈರಣ್ಣ ರಬ್ಬೇಲಿ , ದೊಡ್ಡ ಹನುಮಂತ ರಬ್ಬೆಲಿ ,ಲಿಂಗಣ್ಣ ಅಗಸಿಹಾಳ , ಬಸವರಾಜ ಹಾಲಾಪೂರು , ಗುರುಲಿಂಗಪ್ಪ ಬಳಗಾನೂರ , ಅಮರೇಶ ಪೂಜಾರಿ , ದೇವಣ್ಣ ಹೊಸಮನಿ , ಮಲ್ಲಯ್ಯ ರಬ್ಬೇಲಿ , ಶಿವಶಂಕರ ದನಮರಡಿ , ಸಿದ್ದಪ್ಪ ಆಲ್ಕೋಡಿ , ಬಸವಲಿಂಗ ದನಮರಡಿ , ಶೇಕರಪ್ಪ ಕೌತಾಳ ,ರೇವಣ್ಣಸಿದ್ದಪ್ಪ ಅನ್ವಾರ , ನಾಗರಾಜ ಆರ್ , ಶ್ರೀಧರ ಆರ್ , ಬಾಡದಪ್ಪ ನಾಯಕ , ಗುರುಬಸವ ಆಲ್ಕೋಡಿ , ಉಮಾಶಂಕರ್ ಎಂ , ನರಸಪ್ಪ ನಾಯಕ , ಯಲ್ಲಪ್ಪ ಮಡಿವಾಳ , ಸಣ್ಣ ಶಿವಪ್ಪ , ಪರುಶುರಾಮ , ಗ್ರಾಮಸ್ಥರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಉಪಸ್ಥಿತರಿದ್ದರು.

## ಏಪ್ರೀಲ್ ಕೊನೆಯೊಳಗೆ ತುಂಗಭದ್ರ ಜಲಾಶಯದ ಕ್ರಾಸ್ಟ್‌ಗೇಟ್ ದುರಸ್ಥಿ ಪೂರ್ಣ

ನೈಜ್ಯ ದೆಸೆ ನ್ಯೂಸ್

**ಮಾನ್ವಿ : ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್. ಎಸ್. ಬೋಸರಾಜು ಮಾತನಾಡಿ, ತುಂಗಭದ್ರ ಜಲಾಶಯದ ಕ್ರಾಸ್ಟ್ ಗೇಟ್‌ಗಳ ದುರಸ್ಥಿ ಕಾಮಗಾರಿ ಹಿನ್ನೆಲೆ ಕಾಲುವೆಗಳಿಗೆ ನೀರು ಬಿಡಲಾಗಿರಲಿಲ್ಲ. ಆದರೆ ಕುಡಿಯುವ ನೀರಿನ ತುರ್ತು ಅವಶ್ಯಕತೆ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಮನವಿಯಂತೆ ಕಾಲುವೆಗೆ ನೀರು ಬಿಡುಗಡೆ ಮಾಡಲಾಗಿದೆ. ನಾಲೆ ಒಡೆದಿರುವ ಪ್ರದೇಶಕ್ಕೆ ಮಸ್ಕಿ ಶಾಸಕ ಬಸವನಗೌಡ ತುರ್ವಿಹಾಳ್ ಅವರೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ ಎಂದು ಹೇಳಿದರು.**



ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ತಾತ್ಕಾಲಿಕವಾಗಿ ಮರಳಿನ ಚೀಲಗಳನ್ನು ಬಳಸಿ ನಾಲೆ ದುರಸ್ತಿ ಮಾಡಲಾಗುತ್ತಿದೆ. ನಂತರ ಶಾಶ್ವತ ದುರಸ್ತಿ ಕೈಗೊಳ್ಳಲಾಗುವುದು. ನಾಲೆ ಒಡೆತದಿಂದ ಸುಮಾರು 92 ಎಕರೆ ಬೆಳೆ ನಷ್ಟವಾಗಿದ್ದು, ಕಂದಾಯ ಮತ್ತು ಕೃಷಿ ಇಲಾಖೆ ಸಮೀಕ್ಷೆ ನಡೆಸಿದ್ದು ರೈತರಿಗೆ ಪರಿಹಾರ ನೀಡಲಾಗುವುದು.

ಮುಂದಿನ 2?3 ದಿನಗಳಲ್ಲಿ ಕಾಲುವೆ ಮೂಲಕ ರಬ್ಬಣಕಲ್ ಕೆರೆಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಲಾಗಿದೆ. ನಗರದಲ್ಲಿ ನೀರಿನ ಕೊರತೆ ಇರುವ ವಾರ್ಡ್‌ಗಳಿಗೆ 5 ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುವುದು. ಜೊತೆಗೆ ತುಂಗಭದ್ರ ನದಿಯಿಂದ 3 ಟಿಎಂಸಿ ನೀರನ್ನು ಬಳಸಿಕೊಳ್ಳುವ ಹಾಗೂ ಜಾಕ್‌ವೆಲ್ ಮೂಲಕ ನೀರು ಒದಗಿಸುವ ಕ್ರಮವೂ ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ತುಂಗಭದ್ರ ಅಣೆಕಟ್ಟಿನ 33 ಕ್ರಾಸ್ಟ್ ಗೇಟ್‌ಗಳ ಅಳವಡಿಕೆ ಕಾರ್ಯ ವೇಗವಾಗಿ ನಡೆಯುತ್ತಿದ್ದು ಇದುವರೆಗೆ 18 ಗೇಟ್‌ಗಳು ಪೂರ್ಣಗೊಂಡಿವೆ, 5 ಗೇಟ್‌ಗಳ ಕೆಲಸ ಪ್ರಗತಿಯಲ್ಲಿದೆ. ಏಪ್ರಿಲ್ ಕೊನೆಯೊಳಗೆ ಎಲ್ಲಾ ಗೇಟ್‌ಗಳ ದುರಸ್ಥಿ ಪೂರ್ಣಗೊಳ್ಳಲಿದೆ. ರೈತರು ವದಂತಿಗಳಿಗೆ ತುತ್ತಾಗಬಾರದು, ಈ ಬಾರಿ ಬೆಳೆಗಳಿಗೆ ನೀರು ಒದಗಿಸಲಾಗುತ್ತದೆ ಎಂದು ಭರವಸೆ ನೀಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲ್ ಗಾಪೂರ್ ಸಾಬ್, ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ಬಿ.ಕೆ. ಅಂಬರೇಶಪ್ಪ, ಜಿ. ನಾಗರಾಜ್, ಕಿರಿಲಿಂಗಪ್ಪ, ಮಹಾಂತೇಶ್ ಸ್ವಾಮಿ ರೌಡೂರು, ಹೋನ್ನಪ್ಪ ಹೆಳವಾರ್, ಸೈಯಾದ್ ಖಾಲಿದ್ ಖಾದ್ರಿ, ರಾಜಾ ಸುಭಾಷಚಂದ್ರನಾಯಕ, ಹುಸೇನ್ ಬೇಗ್, ಹಿದಾಯತ್ ನಾಯ್ಕ್ ಉಪಸ್ಥಿತರಿದ್ದರು.

## ಸದಾಶಿವನಗರದ ತ್ರಿಕೋನ ಉದ್ಯಾನದಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಪುತ್ಥಳಿ ಅನಾವರಣ



ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸ್ಯಾಂಕಿ ಕೆರೆ ಮುಖ್ಯದ್ವಾರದ ಮುಂಭಾಗದಲ್ಲಿರುವ ಸದಾಶಿವನಗರದ ತ್ರಿಕೋನ ಉದ್ಯಾನದಲ್ಲಿ ನಿರ್ಮಿಸಲಾಗಿರುವ ಡಾ. ಪುನೀತ್ ರಾಜ್‌ಕುಮಾರ್ ಅವರ 10 ಅಡಿ ಎತ್ತರದ ಪುತ್ಥಳಿಯನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಅನಾವರಣಗೊಳಿಸಿದರು.**

ಈ ವೇಳೆ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ್ ಅವರು ಮಾತನಾಡಿ, ಅಪ್ಪು ಅವರ ಸರಣೆ ನಾಡಿನ ಕಲಾ ರಸಿಕರೂ ಸೇರಿದಂತೆ ನಾಡಿನ ಜನರೆಲ್ಲರ ಹೃದಯಗಳಲ್ಲಿ ಅಮರವಾಗಿದ್ದು, ಅವರ ಆದರ್ಶಗಳು ನಮ ಜೀವನಕ್ಕೆ ಸದಾ ಪ್ರೇರಣೆಯಾಗಿರುತ್ತವೆ. ಅಪ್ಪು ಅವರು ಯಾವ ಪ್ರಚಾರವನ್ನೂ ಬಯಸದೆ ಮಾಡಿರುವ ಸಮಾಜಮುಖಿ ಸೇವೆಗಳು ಅವರ ಉನ್ನತ ವ್ಯಕ್ತಿತ್ವವನ್ನು ಬಿಂಬಿಸುತ್ತವೆ ಎಂದರು.

ಸುಮಾರು 880 ಕೆ.ಜಿ. ತೂಕವಿದ್ದು, ಮೇಲ್ಮೈಯನ್ನು ಪ್ಯಾಟಿನಾ ಫಿನಿಷ್ ಮೂಲಕ ಸಂಸ್ಕರಿಸಲಾಗಿದೆ. ದಟ್ಟ ಬಣ್ಣದ ಛಾಯೆ, ದೃಢತೆ, ದೀರ್ಘಬಾಳಿಕೆ ಹಾಗೂ ವರ್ಷಗಳು ಕಳೆದರೂ ಮಸುಕಾಗದ ಶಿಲ್ಪಸೌಂದರ್ಯವನ್ನು ಗಮನದಲ್ಲಿರಿಸಿಕೊಂಡು ಈ ಪುತ್ಥಳಿಯನ್ನು ರೂಪಿಸಲಾಗಿದೆ ಎಂದು ಅವರು ನುಡಿದರು. ಈ ಸಂದರ್ಭದಲ್ಲಿ ಸಿನಿಮಾ ನಿರ್ದೇಶಕ ಡಾ. ರಾಜೇಂದ್ರ ಸಿಂಗ್ ಬಾಬು, ಮಲ್ಲೇಶ್ವರ ಕ್ಷೇತ್ರದ ಮುಖಂಡರು, ಗಣ್ಯರು ಹಾಗೂ ಅಪಾರ ಸಂಖ್ಯೆಯ ಅಪ್ಪು ಅಭಿಮಾನಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕುರ್ವಕಲಾ ಗ್ರಾಮಕ್ಕೆ ಶಾಸಕರಾದ ಬಸನಗೌಡ ದದ್ದಲ್ ಭೇಟಿ; ಸೇತುವೆ ಕಾಮಗಾರಿ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮೀಣ ಶಾಸಕರಾದ ಬಸನಗೌಡ ದದ್ದಲ್ ಅವರು ಮಾರ್ಚ 20ರಂದು ರಾಯಚೂರು ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ರಾಯಚೂರು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರ ನೇತೃತ್ವದಲ್ಲಿ ಕುರ್ವಕಲಾ ಗ್ರಾಮಕ್ಕೆ ಭೇಟಿ ನೀಡಿ, ಸೇತುವೆ ಕಾಮಗಾರಿಯ ವೀಕ್ಷಣೆ ನಡೆಸಿದರು.**



ಭೇಟಿ ಸಂದರ್ಭದಲ್ಲಿ ಶಾಸಕರು, ದೇವಸ್ಥಾನ ಸುತ್ತಲು ಸಂಚರಿಸಿ ವೀಕ್ಷಣೆ ನಡೆಸಿ, ರಸ್ತೆಗಳು, ಕುಡಿಯುವ ನೀರು, ಸಮುದಾಯ ಭವನ, ಕಲ್ಯಾಣ ಮಂಟಪ ಹಾಗೂ ಹಲವಾರು ಅಭಿವೃದ್ಧಿ ಕಾಮಗಾರಿಗಳ ನೀಲಿ ನಕ್ಷೆ ತಯಾರಿಸಲು ಅಧಿಕಾರಿಗಳಿ ಸೂಚನೆ ನೀಡಿದರು. ರಾಯಚೂರು ಸೇರಿದಂತೆ ಸುತ್ತಲಿನ ಜಿಲ್ಲೆಗಳ ಮತ್ತು ಬೇರೆ ಬೇರೆ ರಾಜ್ಯಗಳ ಬಹಳಷ್ಟು ಭಕ್ತರು ಇಲ್ಲಿಗೆ ಆಗಮಿಸುತ್ತಾರೆ. ಹಾಗಾಗಿ ಗ್ರಾಮ ಸಂಪರ್ಕದ ಎಲ್ಲ ರಸ್ತೆಗಳು ಅಚ್ಚುಕಟ್ಟಾಗಿ ಇರಬೇಕು. ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ದೇವಸ್ಥಾನದ ಅಭಿವೃದ್ಧಿಯ ಜೊತೆಗೆ ಇಲ್ಲಿಗೆ ಆಗಮಿಸುವ ಭಕ್ತರಿಗೆ ಮೂಲಭೂತ ಸೌಲಭ್ಯ ಒದಗಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಧಾರ್ಮಿಕ ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂಬುದನ್ನು ಅರಿತು ಅಧಿಕಾರಿಗಳು ರಸ್ತೆ ಅಭಿವೃದ್ಧಿ, ಕುಡಿಯುವ ನೀರು ಸರಬರಾಜು, ಸಮುದಾಯ ಭವನ ನಿರ್ಮಾಣ, ಕಲ್ಯಾಣ ಮಂಟಪ ನಿರ್ಮಾಣ ಸೇರಿದಂತೆ ಅಗತ್ಯ ಅಭಿವೃದ್ಧಿ ಕಾಮಗಾರಿಗಳ ನೀಲಿನಕ್ಷೆಯನ್ನು ಕೂಡಲೇ ಸಿದ್ಧಪಡಿಸಬೇಕು ಎಂದು ನಿರ್ದೇಶನ ನೀಡಿದರು.




ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಹಂಪಣ್ಣ ಸಜ್ಜನ, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಅಭಿಯಂತರರಾದ ವೆಂಕಟೇಶ ಗಲಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ರಾಘವೇಂದ್ರ, ಕಂದಾಯ ನಿರೀಕ್ಷಕರು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ದತ್ತಾತ್ರೇಯ ಸ್ವಾಮಿಯ ದರ್ಶನ: ಗ್ರಾಮೀಣ ಪ್ರವಾಸ ಸಂದರ್ಭದಲ್ಲಿ ಶಾಸಕರು ಗ್ರಾಮಸ್ಥರೊಂದಿಗೆ ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಕರ್ವಕಲಾ ಗ್ರಾಮದ ಆರಾಧ್ಯ ದೇವರಾದ ದತ್ತಾತ್ರೇಯ ಸ್ವಾಮಿಯ ಆಶೀರ್ವಾದ ಪಡೆದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### BASLP

BASLP (Bachelor of Audiology and Speech-Language Pathology) ಎಂಬುದು 4 ವರ್ಷಗಳ (3 ವರ್ಷಗಳ ಓದು + 1 ವರ್ಷದ ಇಂಟರ್ನ್‌ಶಿಪ್) ಪದವಿ ಕೋರ್ಸ್ ಆಗಿದೆ. ಇದು ಶ್ರವಣ (Hearing) ಮತ್ತು ಮಾತು (Speech) ಸಂಬಂಧಿತ ದೋಷಗಳನ್ನು ಪತ್ತೆಹಚ್ಚಲು ಮತ್ತು ಚಿಕಿತ್ಸೆ ನೀಡಲು ತರಬೇತಿ ನೀಡುತ್ತದೆ. +2 (PUC Science - PCB/PCM) ನಲ್ಲಿ 50% ಅಂಕಗಳೊಂದಿಗೆ ಉತ್ತೀರ್ಣರಾದವರು ಪ್ರವೇಶ ಪಡೆಯಬಹುದು. Yenepoya Medical College +2 BASLPಕೋರ್ಸ್‌ನ ಪ್ರಮುಖ ವಿವರಗಳು (BASLP Course Details in Kannada): ಕೋರ್ಸ್ ಅವಧಿ: 4 ವರ್ಷಗಳು (3 ವರ್ಷಗಳ ಶೈಕ್ಷಣಿಕ + 1 ವರ್ಷದ ಇಂಟರ್ನ್‌ಶಿಪ್) Manipal. ಅರ್ಹತೆ (Eligibility): ವಿಜ್ಞಾನ ವಿಭಾಗದಲ್ಲಿ (Physics, Chemistry, Biology) ಕನಿಷ್ಠ 50% ಅಂಕಗಳೊಂದಿಗೆ ಪಿಯುಸಿ (10+2) ಉತ್ತೀರ್ಣ. ಪ್ರವೇಶ ಪ್ರಕ್ರಿಯೆ: NEET UG, IPU CET, ಅಥ–ವಾ ಆಯಾ ಕಾಲೇಜುಗಳ ಪ್ರವೇಶ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯಬಹುದು Collegedunia. ಕೋರ್ಸ್ ವಿಷಯಗಳು (Syllabus): ಅನಾಟಮಿ, ಫಿಸಿಯಾಲಜಿ, ಸ್ಪೀಚ್–ಲ್ಯಾಂಗ್ವೇಜ್ ಪ್ಯಾಥ–ಾಲಜಿ, ಆಡಿಯಾಲಜಿ, ಮತ್ತು ರೋಗನಿರ್ಣಯದ ತಂತ್ರಗಳು. ಕೆಲಸದ ಅವಕಾಶಗಳು: ಆಸ್ಪತ್ರೆಗಳು, ಶಾಲೆಗಳು, ಪುನರ್ವಸತಿ ಕೇಂದ್ರಗಳು (Rehabilitation centers), ಮತ್ತು ಕ್ಲಿನಿಕ್ಗಳಲ್ಲಿ ಆಡಿಯಾಲಜಿಸ್ಟ್ (Audiologist) ಅಥವಾ ಸ್ಪೀಚ್–ಲ್ಯಾಂಗ್ವೇಜ್ ಪ್ಯಾಥಾಲಜಿಸ್ಟ್ ಆಗಿ ಕೆಲಸ ಮಾಡಬಹುದು Mymathews. ಸಂಬಳ: ಆರಂಭಿಕ ಸಂಬಳವು ವಾರ್ಷಿಕ –3.5 ರಿಂದ –7 ಲಕ್ಷದವರೆಗೆ ಇರಬಹುದು IHS Autonomous College. Manipal +4 ಕರ್ನಾಟಕದ ಪ್ರಮುಖ BASLP ಕಾಲೇಜುಗಳು: ಯೆನೆಪೋಯ ಮೆಡಿಕಲ್ ಕಾಲೇಜು, ಮಂಗಳೂರು Yenepoya Medical College. ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (MAHE) Manipal. A.J. Institute of Speech and Hearing, Karnataka.

## ಜೊಮಾಟೋ ಪ್ಲಾಟ್ ಫಾರ್ಮ್ ಶುಲ್ಕ ಏರಿಕೆ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಗಲ್ಫ್ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧ ಭೀತಿಯ ಪರಿಣಾಮ ಜಾಗತಿಕ ಸರಬರಾಜು ಸರಪಳಿಗೆ ಹೊಡೆತ ನೀಡುತ್ತಿದ್ದು, ಅದರ ಬಿಸಿ ಈಗ ಬೆಂಗಳೂರು ನಗರಕ್ಕೂ ತಟ್ಟಲು ಆರಂಭಿಸಿದೆ. ವಿಶೇಷವಾಗಿ ಆಹಾರ ಡೆಲಿವರಿ ಸೇವೆಗಳ ಮೇಲೆ ಪರಿಣಾಮ ಸ್ಪಷ್ಟವಾಗುತ್ತಿದೆ.**




ಈ ನಡುವೆ ಜೊಮಾಟೋ ತನ್ನ ಪ್ಲಾಟ್‌ಫಾರ್ಮ್ ಶುಲ್ಕವನ್ನು ಮತ್ತೆ ಹೆಚ್ಚಿಸಿರುವುದು ಗ್ರಾಹಕರಿಗೆ ಮತ್ತೊಂದು ಹೊರೆಯಾಗಿದೆ. ಗಲ್ಫ್ ರಾಷ್ಟ್ರಗಳಲ್ಲಿನ ಅಶಾಂತಿ ಪರಿಸ್ಥಿತಿ ಜಾಗತಿಕ ಇಂಧನ ಹಾಗೂ ಲಾಜಿಸ್ಟಿಕ್ಸ್ ಕ್ಷೇತ್ರದಲ್ಲಿ ಅಸ್ಥಿರತೆ ಉಂಟುಮಾಡಿದ್ದು, ಇದರ ಪರಿಣಾಮವಾಗಿ ಬೆಂಗಳೂರು ಸೇರಿದಂತೆ ಮಹಾನಗರಗಳಲ್ಲಿ ಆನ್‌ಲೈನ್ ಆಹಾರ ಡೆಲಿವರಿ ಸೇವೆಗಳು ಬೆಲೆ ಏರಿಕೆಯನ್ನು ಕಂಡಿವೆ. ಈ ನಡುವೆ ಜೊಮಾಟೋ ತನ್ನ ಪ್ಲಾಟ್‌ಫಾರ್ಮ್ ಶುಲ್ಕವನ್ನು ಶೇ. 19ರಷ್ಟು ಏರಿಸಿದೆ. ಒಂದು ವರ್ಷದೊಳಗೆ ಇದೇ ಎರಡನೇ ಬಾರಿ ಪ್ಲಾಟ್‌ಫಾರ್ಮ್ ಶುಲ್ಕ ಹೆಚ್ಚಳ ಮಾಡಲಾಗಿದೆ. ಈ ಹಿಂದೆ ಇದ್ದ 12.50 ಇದ್ದ ಪ್ಲಾಟ್‌ಫಾರ್ಮ್ ಶುಲ್ಕವನ್ನು 14.90 ರೂ.ಗಳಿಗೆ ಏರಿಸಲಾಗಿದ್ದು, ಪ್ರತಿ ಆರ್ಡರ್‌ಗೂ ಈ ಶುಲ್ಕ ಅನ್ವಯವಾಗುತ್ತದೆ. ಅಂದರೆ, ಪ್ರತೀ ಆರ್ಡರ್‌ಗೆ 2.40 ಹೆಚ್ಚುವರಿ ಶುಲ್ಕ ಗ್ರಾಹಕರ ಮೇಲೆ ಬೀಳಲಿದೆ.ಈ ಹೆಚ್ಚಳದಿಂದ ಈಗಾಗಲೇ ದುಬಾರಿಯಾಗಿರುವ ಆನ್‌ಲೈನ್ ಆಹಾರ ಸೇವೆಗಳು ಮತ್ತಷ್ಟು ದುಬಾರಿಯಾಗುವ ಸಾಧ್ಯತೆ ಇದೆ. ಇಂಧನ ಬೆಲೆ, ಡೆಲಿವರಿ ವೆಚ್ಚ, ಮತ್ತು ಸರಬರಾಜು ಸಮಸ್ಯೆಗಳು ಗ್ರಾಹಕರಿಗೆ ನೇರ ಹೊರೆ ಆಗುತ್ತಿದೆ.ಇದರ ಜೊತೆಗೆ, ಡೆಲಿವರಿ ಪಾಲುದಾರರಿಗೂ ಆರ್ಡರ್‌ಗಳ ಪ್ರಮಾಣದಲ್ಲಿ ಸ್ವಲ್ಪ ಕುಸಿತ ಕಾಣಿಸಿಕೊಳ್ಳುತ್ತಿರುವ ವರದಿಗಳು ಬರುತ್ತಿವೆ.ಜಾಗತಿಕ ಅಶಾಂತಿಯ ಪರಿಣಾಮ ಸ್ಥಳೀಯ ಜೀವನ ಶೈಲಿಯ ಮೇಲೂ ಪರಿಣಾಮ ಬೀರುತ್ತಿದೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಯೋಗದಿಂದ ಆರೋಗ್ಯ ಮತ್ತು ಮನಶಾಂತಿ ಸಾಧನೆ :ಕರಿಬಸಪ್ಪ ಜೀ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಯೋಗ ಸನ್ನಿಧಿಯಲ್ಲಿ ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್, ಮಾನ್ವಿ ಹಾಗೂ ಖ್ಯಾತ ಅದಿತಿ ಟ್ರಸ್ಟ್ ಅವರ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರಿಗಾಗಿ ಏರ್ಪಡಿಸಲಾಗಿದ್ದ 1 ವಾರದ ಉಚಿತ ಯೋಗ ಶಿಬಿರದ ಸಮಾರೋಪ ಸಮಾರಂಭ ಉತ್ಸಾಹಭರಿತವಾಗಿ ಜರುಗಿತು. ಈ ಸಂದರ್ಭದಲ್ಲಿ ಬೆಂಗಳೂರು ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯದ ಖ್ಯಾತ ಯೋಗ ಗುರು ಕರಿಬಸಪ್ಪ ಜೀ ಮಾತನಾಡಿ, ಯೋಗವು ದೈಹಿಕ ಆರೋಗ್ಯದ ಜೊತೆಗೆ ಮನಸ್ಸಿನ ಶಾಂತಿ ಮತ್ತು ಸಮತೋಲನಕ್ಕೆ ಮಹತ್ವದ ಪಾತ್ರವಹಿಸುತ್ತದೆ ಎಂದು ಹೇಳಿದರು.**

ನಿಯಮಿತ ಯೋಗಾಭ್ಯಾಸದಿಂದ ಒತ್ತಡ ನಿವಾರಣೆ ಆಗಿ ಆರೋಗ್ಯಕರ ಜೀವನ ನಡೆಸಲು ಸಾಧ್ಯವೆಂದು ಅವರು ತಿಳಿಸಿದರು.



ಕಾರ್ಯಕ್ರಮವನ್ನು ಅಧ್ಯಕ್ಷತೆ ವಹಿಸಿ ಮಾತನಾಡಿದ ಅಂಬಿಕಾ ಮಧುಸೂದನ್, ಇಂದಿನ ಜೀವನಶೈಲಿಯಲ್ಲಿ ಮಹಿಳೆಯರು ತಮ್ಮ ಆರೋಗ್ಯವನ್ನು ಕಡೆಗಣಿಸುವುದು ಹೆಚ್ಚಾಗಿದ್ದು, ಇದರಿಂದ ಅನೇಕ ಸಮಸ್ಯೆಗಳು ಉಂಟಾಗುತ್ತವೆ ಎಂದು ಹೇಳಿದರು. ಆದ–ರಿಂದ ಮಹಿಳೆಯರು ಯೋಗವನ್ನು ಜೀವನಶೈಲಿಯಾಗಿ ಅಳವಡಿಸಿಕೊಂಡು ದಿನನಿತ್ಯ ಯೋಗಾಭ್ಯಾಸ ಮಾಡುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮಹಿಳೆಯರ ಆರೋಗ್ಯವೇ ಕುಟುಂಬದ ಹಾಗೂ ಸಮಾಜದ ಅಭಿವೃದ್ಧಿಗೆ ಆಧಾರವಾಗಿರುವುದರಿಂದ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶತಾಯುಷಿ ರಾಮಲಿಂಗಮ್ಮ ನಂದಿಹಾಳ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಲಿಂಗಸಗೂರು ಸ್ವಾಮಿ ವಿವೇಕಾನಂದ ಆಯುರ್ವೇದಿಕ್



ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ರಾಜಶೇಖರ್ ಹೆಚ್ ಅವರು ಯೋಗ ಶಿಬಿರಾರ್ಥಿಗಳಿಗೆ ಯೋಗ ಮ್ಯಾಟ್‌ಗಳನ್ನು ವಿತರಿಸಿ, ಯೋಗಾಭ್ಯಾಸವನ್ನು ನಿರಂತರವಾಗಿ ಮುಂದುವರಿಸಲು ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ ಗೌರಮ್ಮ ಮಹಾಂತಯ್ಯ ಸ್ವಾಮಿ, ದೀಪ್ತಿ, ಸುಮಾ ಶಂಕರಗೌಡ, ಮಂಜುಳಾ ದೇವಯ್ಯ ಶಿವಪೂಜಿ, ಶಿಕ್ಷಕರಾದ ಶರಣಯ್ಯ ಸ್ವಾಮಿ, ಯೋಗ ಗುರುಗಳಾದ ಅನ್ನದಾನಯ್ಯ ಸ್ವಾಮಿ ಸೇರಿದಂತೆ ಅನೇಕ ಶಿಬಿರಾರ್ಥಿಗಳು ಹಾಗೂ ಸ್ಥಳೀಯರು ಉಪಸ್ಥಿತರಿದ್ದರು. ಕಾರ್ಯಕ್ರಮದ ಯಶಸ್ಸಿಗೆ ಟ್ರಸ್ಟ್ ಸದಸ್ಯರು ಹಾಗೂ ಸ್ವಯಂಸೇವಕರು ಶ್ರಮಿಸಿದರು.

# ಪ್ರಜಾಸೌಧ ವಿವಾದ: ವಿರೋಧಿಗಳಿಗೆ ನಾಡಗೌಡ ತಿರುಗೇಟು




❑ ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ತಾಳಿಕೋಟಿ ತಾಲ್ಲೂಕಿನಲ್ಲಿ ಪ್ರಜಾಸೌಧ ನಿರ್ಮಾಣ ವಿಚಾರವಾಗಿ ಉಂಟಾಗಿರುವ ವಿವಾದಕ್ಕೆ ಸಂಬಂಧಿಸಿ ಶಾಸಕ ಸಿ.ಎಸ್. ನಾಡಗೌಡ ಅವರು ವಿರೋಧ ಪಕ್ಷದ ನಾಯಕರ ವಿರುದ್ಧ ತೀವ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದರು.**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಸೌಧ ನಿರ್ಮಾಣಕ್ಕಾಗಿ ಮಂಜೂರಾದ ಅನುದಾನ ಹಿಂತಿರುಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಸರ್ಕಾರವೇ ತ್ವರಿತವಾಗಿ ಜಾಗ ಗುರುತಿಸಲು ಸೂಚನೆ ನೀಡಿತ್ತು ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಪ್ರಭುಗೌಡ ಮದರಕಲ್ ಸೇರಿದಂತೆ ಕೆಲವರು ಎರಡು ಎಕರೆ ಜಮೀನು ದಾನವಾಗಿ ನೀಡಲು ಮುಂದಾಗಿದ್ದಾರೆ. ಇದಕ್ಕೆ ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಪಿಡಬ್ಲ್ಯೂಡಿ ಮತ್ತು ಕೆಇಬಿ ಇಲಾಖೆಗಳು ಜಾಗ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದ ಕಾರಣ, ದಾನಿಗಳ ಸಹಕಾರದೊಂದಿಗೆ ಸರ್ಕಾರದ ನಿಯಮಾನುಸಾರವಾಗಿ ನಿರ್ಮಾಣ ಕಾರ್ಯ ಮುಂದುವರಿಸಲು ಪ್ರಯತ್ನಿಸಲಾಗುತ್ತಿದೆ.

ಆದರೆ ಕೆಲವರು ಜನರಲ್ಲಿ ಗೊಂದಲ ಮೂಡಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ತಾವು ಶಾಸಕರಾಗಿ ಆಯ್ಕೆಯಾದ ಬಳಿಕವೇ ಪ್ರಜಾಸೌಧ ನಿರ್ಮಾಣದ ಪ್ರಕ್ರಿಯೆ ಆರಂಭಿಸಿದ್ದಾಗಿ ತಿಳಿಸಿದ ಅವರು, ಎರಡನೇ ತಿಂಗಳಲ್ಲೇ ಜಾಗ ಗುರುತಿಸುವ ಕಾರ್ಯ ಕೈಗೊಳ್ಳಲಾಗಿದೆ ಎಂದರು. ಕೆಲವು ಕಾರಣಗಳಿಂದ ವಿಳಂಬವಾದರೂ, ಇದೀಗ ಮೈಲೇಶ್ವರ ರಸ್ತೆಯಲ್ಲಿರುವ ಸ್ಥಳವನ್ನು ಜಿಲ್ಲಾಧಿಕಾ–ರಿಗಳು ಪರಿಶೀಲಿಸಿ ಅಗತ್ಯ ಮೂಲಸೌಕರ್ಯಗಳ ಬಗ್ಗೆ ಸೂಚನೆ ನೀಡಿದ್ದಾರೆ ಎಂದು ವಿವರಿಸಿದರು.

ಹಳೆಯ ಅವಿಭಜಿತ ತಾಲ್ಲೂಕಿನ ಕಾಲದಲ್ಲಿ ಜನರು ದೂರ ಪ್ರಯಾಣಿಸಿ ಕೆಲಸಗಳನ್ನು ಮುಗಿಸುತ್ತಿದ್ದರು. ಈಗ ಕೆಲವೇ ಕಿಲೋಮೀಟ–ರ್ ದೂರದ ವಿಚಾರವನ್ನು ದೊಡ್ಡದಾಗಿ ಮಾಡುವುದು ಸಮಂಜಸವಲ್ಲ ಎಂದು ಟೀಕಿಸಿದರು. ಇದೇ ವೇಳೆ ಮಾಜಿ ಶಾಸಕ ಎ.ಎಸ್. ಪಾಟೀಲ್ ನಡಹಳ್ಳಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ತಮ್ಮ ಅಧಿಕಾರಾವಧಿಯಲ್ಲಿ ಪ್ರಜಾಸೌಧ ನಿರ್ಮಾಣ–ಕ್ಕೆ ಯಾವುದೇ ಸ್ಪಷ್ಟ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು. "ಐದು ವರ್ಷಗಳಲ್ಲಿ ಜಾಗ ಗುರುತಿಸಲು ಅಗತ್ಯ ಇಚ್ಛಾಶಕ್ತಿ ತೋರಿಸಲಿಲ್ಲ.


ನಮ್ಮ ಮನೆಗೆ ಬಂದು ಗೌರವದಿಂದ ವರ್ತಿಸಿದ್ದ ವಿಚಾರವನ್ನೂ ಮರೆತಂತಿ–ದೆ" ಎಂದು ಕಟುವಾಗಿ ಪ್ರತಿಕ್ರಿಯಿಸಿದರು. ಆಸ್ತಿ ಸಂಬಂಧಿತ ಆರೋಪಗಳ ಕುರಿತು ಪ್ರತಿಕ್ರಿಯಿಸಿದ ಅವರು, ಯಾವುದೇ ಆರೋಪಗಳಿಗೆ ದಾಖಲೆಗಳನ್ನು ನೀಡಲು ಸವಾಲು ಹಾಕಿದರು. ಆಧಾರರಹಿತ ಆರೋಪಗಳನ್ನು ಮುಂದುವರಿಸಿದರೆ ಮಾನಹಾನಿ ಮೊಕದ್ದಮೆ ಹೂಡುವುದಾಗಿ ಎಚ್ಚರಿಸಿದರು. ಪ್ರಜಾಸೌಧ ನಿರ್ಮಾಣಕ್ಕಾಗಿ ಒಂದೇ ಸ್ಥಳದ ಮೇಲೆ ಹಠವಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಂದ ಯಾರಾದರೂ ಉಚಿತವಾಗಿ ಜಮೀನು ನೀಡಲು ಮುಂದಾದರೆ ಸ್ಥಳ ಬದಲಾವಣೆಯನ್ನೂ ಪರಿಗಣಿಸಲಾಗುವುದು ಎಂದು ಹೇಳಿದರು. ಸಾರ್ವಜನಿಕ ಜೀವನದಲ್ಲಿ ಶಿಷ್ಟಾಚಾರ ಕಾಪಾಡಿಕೊಳ್ಳಬೇಕು. ವೈಯಕ್ತಿಕ ಟೀಕೆಗಳ ಬದಲು ಜನಪರ ವಿಚಾರಗಳತ್ತ ಗಮನ ಹ–ರಿಸಬೇಕು ಎಂದು ಅವರು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಗುರು ತಾರನಾಳ, ಮಹೆಬೂಬ ಗೊಳಸಂಗಿ, ವೈ.ಎಚ್. ವಿಜಯಕರ ಸೇ–ರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಬೆಂಗಳೂರಿನಲ್ಲಿ ಮಾ.24ಕ್ಕೆ ಭೋವಿ, ಬಂಜಾರ, ಕೊರಮ, ಕೊರಚ, ಜನರಿಂದ ಬೃಹತ್ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

**ಒಳಮೀಸಲಾತಿ ಕುರಿತು ಎದ್ದಿರುವ ಗೊಂದಲದಲ್ಲಿ ನ್ಯಾಯಮೂರ್ತಿ ನಾಗಮೋಹನ್ ದಾಸ ಅವರ ವರದಿ ಅವೈಜ್ಞಾನಿಕವಾಗಿದೆ. ಅದನ್ನು ವಿರೋಧಿಸಿ ಮಾ.24 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಭೋವಿ, ಬಂಜಾರ, ಕೊರಮ, ಕೊರಚ, ಸಮುದಾಯಗಳಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜದ ಜನರು ಭಾಗವಹಿಸಿರಿ ಎಂದು ಬಾಗಲಕೋಟೆ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳು ಕರೆ ಕೊಟ್ಟರು.**

ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಒಳಮೀಸಲಾತಿ ಜಾರಿಗೆ ಯಾವುದೋ ರಾಜಕೀಯ ಒತ್ತಡಕ್ಕೆ ಮಣಿದು ಒಂದು ಸಮುದಾಯವನ್ನು




ಮುಂದಿಡುವ ಕೆಲಸ ಆಗುತ್ತಿದೆ. ಪ್ರವರ್ಗ ಎ,ಬಿ,ಸಿ, ಮಾಡಲಾಗಿದ್ದು, ಅಲೆಮಾರಿ ಸಮುದಾಯಗಳಾದ ಭೋವಿ, ಬಂಜಾರ, ಕೊರಮ, ಕೊರಚ, ಸಮುದಾಯಗಳನ್ನು 'ಸಿ'ವರ್ಗದಲ್ಲಿ ಸೇರಿಸಲಾಗಿದ್ದು, ಎ ಮತ್ತು ಬಿ ವರ್ಗಗಳಿಗೆ ಮಾತ್ರ ಉದ್ಯೋಗ ಸಿಗುತ್ತದೆ.

'ಸಿ' ವರ್ಗದಲ್ಲಿರುವವರಿಗೆ ಯಾವುದೇ ಉದ್ಯೋಗ ಸಿಗುವುದಿಲ್ಲ. ಈ ಕಾರಣಕ್ಕಾಗಿ ಒಳಮೀಸಲಾತಿ ವಿರೋಧಿಸಿ ಪ್ರತಿಭಟನೆ ನಡೆಸುತ್ತೇವೆ, ರಾಜ್ಯ ಸರ್ಕಾರವು ಮಾ.27 ರಂದು ಒಳಮೀಸಲಾತಿ ವಿಷಯದ ಕುರಿತಂತೆ ವಿಶೇಷವಾಗಿ ಸಚಿವ ಸಂಪುಟ ಅಧಿವೇಶನ ಕರೆದಿದ್ದು, ಅದರಲ್ಲಿ ನಮ್ಮ ಅಲೆಮಾರಿ ಸಮುದಾಯಗಳಿಗೆ ಅವಕಾಶ ಕೊಡುವಂತೆ ಸರ್ಕಾರಕ್ಕೆ ಒತ್ತಡ ಹಾಕಿದರು. ನಂತರ ಚಿತ್ರದುರ್ಗ ಬಂಜಾರ ಸಮಾಜದ ಗುರುಪೀಠದ ಸ್ವಾಮಿಗಳಾದ ಸರ್ದಾರ್ ಸೇವಲಾಲ್ ಮಾತನಾಡಿ, ನಮ್ಮ ಸಮುದಾಯಗಳನ್ನು ತಿರಸ್ಕಾರ ಮಾಡಿದ್ದಕ್ಕೆ ಈ ಹಿಂದೆ ಬಸವರಾಜ ಬೊಮ್ಮಾಯಿ ಬಿಜೆಪಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸಿದ್ದೇವೆ.

ಸರ್ಕಾರದ ವಿಶೇಷ ಸಚಿವ ಸಂಪುಟದಲ್ಲಿ ನಮ್ಮ ಪರವಾದ ನ್ಯಾಯ ಸಿಗಲಿದೆಂಬ ಭರವಸೆಯೂ ಕೂಡ ನಮಗೆ ಇದೆ ಎಂದರು. ಈ ಸಂದರ್ಭದಲ್ಲಿ: ಅಶೋಕ ಉಮಲೂಟಿ, ಹಂಸರಾಜ, ಲಕ್ಷ್ಮಣ ಭೋವಿ, ಆನಂದ ಭೋವಿ, ಅಂಬಣ್ಣ ಗುಂಜಳ್ಳಿ, ಯಲ್ಲಪ್ಪ, ನಾರಾಯಣಸ್ವಾಮಿ, ಈಶಪ್ಪ ಜಾದವ್, ಶೇಖರಪ್ಪ ರಾಠೋಡ್, ಜಯಶ್ರೀ, ಭಾಗ್ಯಲಕ್ಷ್ಮೀ, ಸೇರಿದಂತೆ ಸಮಾಜದ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದರು.

# ಹಂಚಿನಾಳ ಕ್ಯಾಂಪಿನಲ್ಲಿ ಸಹಕಾರ ಸಂಘದ ಸಹಯೋಗದಲ್ಲಿ ನೂತನ ಜೋಳ ಖರೀದಿ ಕೇಂದ್ರ ಪ್ರಾರಂಭ



❑ ನೈಜ್ಯ ದೆಸೆ ನ್ಯೂಸ್

**ಕರ್ನಾಟಕ ಸರ್ಕಾರವು (ಎಂಎಸ್ಪಿ) ರೈತರಿಂದ ಬೆಂಬಲ ಬೆಲೆಯಲ್ಲಿ ಮುಂಗಾರು ಮತ್ತು ಹಿಂಗಾರು ಜೋಳ ಮೆಕ್ಕೆಜೋಳವನ್ನು ಖರೀದಿಸಲು ರಾಜ್ಯದ ವಿವಿಧ ಎಪಿಎಂಸಿ ಮಾರುಕಟ್ಟೆಗಳಲ್ಲಿ ಖರೀದಿ ಕೇಂದ್ರಗಳನ್ನು ಆರಂಭಿಸಿದ್ದು, ಕೆಎಂಎಫ್ ಮೂಲಕ ರೈತರಿಂದ ನೇರವಾಗಿ ಪ್ರತಿ ಕ್ವಿಂಟಾಲ್‌ಗೆ ಬೆಂಬಲ ಬೆಲೆಯನ್ನು ನಿಗದಿಪಡಿಸಿ, ಒಬ್ಬ ರೈತರಿಂದ ಗರಿಷ್ಠ 20ರಿಂದ 25 ಕ್ವಿಂಟಾಲ್ ವರೆಗೆ ಖರೀದಿ ಮಾಡಲಾಗುತ್ತದೆ.**

ಈ ಹಿನ್ನೆಲೆಯಲ್ಲಿ ತಾಲೂಕಿನ ಹಂಚಿನಾಳ ಕ್ಯಾಂಪಿನ ಸಹಕಾರ ಸಂಘದ ವತಿಯಿಂದ ಮಾ.20 ಶುಕ್ರವಾರ ನೂತನ ಜೋಳ ಖರೀದಿ ಕೇಂದ್ರವನ್ನು ಜೋಳ ಖರೀದಿಸುವ ಮೂಲಕ ಜೋಳದ ರಾಶಿಗೆ ಪೂಜೆ ಸಲ್ಲಿಸಿ ಪ್ರಾರಂಭಿಸಲಾಯಿತು. ಗದಗ, ಲಕ್ಷ್ಮೇಶ್ವರ, ಮುಂಡರಗಿ, ನರಗುಂದ, ರೋಣ ಮುಂತಾದ ಎಪಿಎಂಸಿ ಪ್ರಾಂಗಣಗಳಲ್ಲಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಪ್ರಕ್ರಿಯೆ: ಆಯಾ ಜಿಲ್ಲೆಯ ಎಪಿಎಂಸಿ ಅಥವಾ ಕೃಷಿ ಇಲಾಖೆ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಅಗತ್ಯ ದಾಖಲೆಗಳಾದ ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಮತ್ತು ಬೆಳೆ ದೃಢೀಕರಣ ಪತ್ರ, ಉದ್ದೇಶ: ಮಾರುಕಟ್ಟೆಯಲ್ಲಿ ಬೆಲೆ ಕುಸಿದಾಗ ರೈತ–ರಿಗೆ ಬೆಂಬಲ ಬೆಲೆ ಒದಗಿಸಿ ನಷ್ಟ ತಪ್ಪಿಸುವುದು.

ರೈತರು ಹತ್ತಿರದ ಎಪಿಎಂಸಿ ಕೇಂದ್ರಗಳು ಅಥವಾ ಕೃಷಿ ಇಲಾಖೆ ಕಚೇರಿಯನ್ನು ಸಂಪರ್ಕಿಸಿ ನಿಖರವಾದ ದರ ಮತ್ತು ನೋಂದಣಿ ದಿನಾಂಕದ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಬಹುದಾಗಿದೆ. ಈ ಸಂದರ್ಭದಲ್ಲಿ: ಉಪ ತಹಶೀಲ್ದಾರ್ ಸೂಗೂರು ವೀರೇಶಪ್ಪ, ಶಂಬಣ್ಣ ಸಾಹುಕಾರ್, ಕೃಷಿ ಅಧಿಕಾರಿಗಳು, ಸಂಘದ ಅಧ್ಯಕ್ಷರಾದ ಶೇಖರಗೌಡ, ನಿರ್ದೇಶಕರು, ರೈತರು, ಸೇರಿದಂತೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

# "ಗುಲಾಮಗಿರಿಯಿಂದ ಮುಕ್ತಗೊಳಿಸಲು ರಾಜಕಾರಣಕ್ಕೆ ಬಂದೆ" :ನಡಹಳ್ಳಿ ವಾಗ್ದಾಳಿ

❑ ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಕ್ಷೇತ್ರದ ರಾಜಕೀಯ ವಾತಾವರಣ ತೀವ್ರಗೊಂಡಿರುವ ನಡುವೆಯೇ ಮಾಜಿ ಶಾಸಕ ಹಾಗೂ ಬಿಜೆಪಿ ರೈತ ಮೋರ್ಚಾ ರಾಜ್ಯಾಧ್ಯಕ್ಷ ಎ.ಎಸ್. ಪಾಟೀಲ್ ನಡಹಳ್ಳಿ ಅವರು ಹಾಲಿ ಶಾಸಕ ಸಿ.ಎಸ್. ನಾಡಗೌಡರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಪಟ್ಟಣದ ದಾಸೋಹ ನಿಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಳಿಕೋಟಿ ತಾಲೂಕು ಘೋಷಣೆ ವಿಚಾರದಲ್ಲಿ ನಾಡಗೌಡರು ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ಆರೋಪಿಸಿದರು.**

"ಹಿಂದಿನ ಬಿಜೆಪಿ ಆಡಳಿತಾವಧಿಯಲ್ಲೇ ತಾಳಿಕೋಟಿಯನ್ನು ತಾಲೂಕಾಗಿ ಘೋಷಿಸಲಾಗಿದೆ. ಅದನ್ನು ತಮ್ಮ ಸಾಧನೆ ಎಂದು ಹೇಳಿಕೊಳ್ಳುವುದು ಸರಿಯಲ್ಲ" ಎಂದರು. ತಮ್ಮ ರಾಜಕೀಯ ನಿಲುವು ಕುರಿತು ಮಾತನಾಡಿದ ಅವರು, "ಕ್ಷೇತ್ರವನ್ನು ಗುಲಾಮಗಿರಿ ಮನೋಭಾವದಿಂದ ಮುಕ್ತಗೊಳಿಸಲು ನಾನು ರಾಜಕಾರಣಕ್ಕೆ ಬಂದಿದ್ದೇನೆ.



ಯಾರ ಮನೆಗೂ ಹೋಗಿ ತಲೆಬಾಗುವ ರಾಜ–ಕಾರಣ ನನ್ನದು ಅಲ್ಲ" ಎಂದು ಹೇಳಿದರು. "ನಾನು ಯಾರ ಮನೆಗೆ ಹೋಗಿ ಬಗ್ಗಿದ್ದೇನೆ ಎಂದು ಯಾರಾದರೂ ಸಾಬೀತುಪಡಿಸಿದರೆ, ನಾನು ರಾಜಕೀಯದಿಂದ ಹಿಂದೆ ಸರಿಯುತ್ತೇನೆ" ಎಂದು ಸವಾಲು ಹಾಕಿದರು.

ನೀರಾವರಿ ಹೋರಾಟದ ಕುರಿತು ಉಲ್ಲೇಖಿಸಿದ ಅವರು, "ನಾನು ಕಾಂಗ್ರೆಸ್‌ನಲ್ಲಿ ಇದ್ದಾಗಲೇ ಸಿದ್ದರಾಮಯ್ಯ ಎದುರು ನಿಂತು ಹೋರಾಟ ಮಾಡಿದ್ದೇನೆ" ಎಂದು ಹೇಳಿದರು. ಬೇನಾಮಿ ಆಸ್ತಿ ಆರೋಪಗಳನ್ನು ಪ್ರಸ್ತಾಪಿಸಿದ ಅವರು, "ಬಸರಕೋಡದಲ್ಲಿ ನೂರಾರು ಎಕರೆ ಆಸ್ತಿ ಯಾರಿಗೆ ಸೇರಿದೆ ಎಂಬುದನ್ನು ಬಹಿರಂಗಪಡಿಸಲು ಸಿದ್ಧನಿದ್ದೇನೆ. ಅಗತ್ಯ ದಾಖಲೆಗಳು ನನ್ನ ಬಳಿ ಇವೆ" ಎಂದು ಹೇಳಿದರು. "ಮಾನಹಾನಿ ಮೊಕದ್ದಮೆ ಹಾಕಿದರೂ ನ್ಯಾಯಾಲಯದಲ್ಲಿ ಎದುರಿಸಲು ಸಿದ್ಧ. ಆರೋಪ?ಪ್ರತ್ಯಾರೋಪಗಳ ವಿಷಯದಲ್ಲಿ ನಮ್ಮ ಕಾರ್ಯಕರ್ತರೂ ಹಿಂಜ–ರಿಯುವುದಿಲ್ಲ" ಎಂದು ಎಚ್ಚರಿಕೆ ನೀಡಿದರು.

ಬಸರಕೋಡ ಹಾಗೂ ನಾಲತವಾಡ ಪ್ರದೇಶಗಳ ಅಭಿವೃದ್ಧಿ ವಿಚಾರವನ್ನು ಪ್ರಸ್ತಾಪಿಸಿದ ಅವರು, ರಸ್ತೆ, ಮನೆ ಹಂಚಿಕೆ ಹಾಗೂ ಸುವರ್ಣ ಗ್ರಾಮ ಯೋಜನೆಗಳಲ್ಲಿ ಅನೇಕ ಗೊಂದಲಗಳಿವೆ ಎಂದು ಆರೋಪಿಸಿದರು. ಪ್ರಜಾಸೌಧ ನಿರ್ಮಾಣ ವಿಚಾರದಲ್ಲಿ, "ನಗರದ ಹೊರವಲಯದಲ್ಲಿ ನಿರ್ಮಿಸುವ ಬದಲು ಜನ–ರಿಗೆ ಅನುಕೂಲವಾಗುವಂತೆ ನಗರದಲ್ಲೇ ನಿರ್ಮಿಸಬೇಕು. ಹೋರಾಟಗಾರರಿಗೆ ನೋಟಿಸ್ ನೀಡುವುದು ಸರಿಯಲ್ಲ" ಎಂದರು. ತಾಳಿಕೋಟಿ ಹಾಗೂ ಮುದ್ದೇಬಿಹಾಳ ಕೆರೆ ಅಭಿವೃದ್ಧಿಗೆ ಮೀಸಲಾದ ಅನುದಾನವನ್ನು ಸಮರ್ಪಕವಾಗಿ ಬಳಸಬೇಕು ಎಂದು ಅವರು ಒತ್ತಾಯಿಸಿದರು. "ನೂರಾರು ಕೋಟಿ ಅನುದಾನ ತಂದಿದ್ದೇವೆ ಎನ್ನುವವರು ದಾಖಲೆ ನೀಡಬೇಕು" ಎಂದು ಪ್ರಶ್ನಿಸಿದರು. ರಾಜಕೀಯ ನಿಷ್ಠೆ ಕುರಿತು ಟೀಕಿಸಿದ ಅವರು, "ನಮ್ಮ ಪಕ್ಷದಲ್ಲಿದ್ದು ನಿಮ್ಮ ಪರ ಕೆಲಸ ಮಾಡಿದವರು ಇದ್ದಾರೆ ಎಂಬುದು ನಮಗೆ ತಿಳಿದಿದೆ" ಎಂದರು. ಕೆಲವು ಹಗರಣಗಳ ಬಗ್ಗೆ ದಾಖಲೆಗಳಿವೆ ಎಂದು ಹೇಳಿದ ಅವರು, "ಸಮಯ ಬಂದಾಗ ಎಲ್ಲವನ್ನೂ ಬಹಿರಂಗಪಡಿಸುತ್ತೇನೆ" ಎಂದು ಹೇಳಿದರು. ಪ್ರಜಾಸೌಧ ನಿರ್ಮಾಣದ ಕುರಿತು ಗ್ರಾಮಸಭೆ ಕರೆದು,

ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ವ್ಯಾಪಾರಸ್ಥರ ಅಭಿಪ್ರಾಯ ಪಡೆದು ನಿರ್ಧಾರ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು. ಕೊನೆಯಲ್ಲಿ ಮತ್ತೊಮ್ಮೆ ವಾಗ್ದಾಳಿ ನಡೆಸಿದ ಅವರು, "ಜನರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವುದೇ ನನ್ನ ಉದ್ದೇಶ. ತಪ್ಪು ನಿರ್ಧಾರಗಳನ್ನು ಜನರು ಸಹಿಸುವುದಿಲ್ಲ" ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101